ಸಂಪುಟ : 8 ಸಂಚಿಕೆ : 163 ಪುಟ : 4 ಬೆಲೆ : 3.00 ಮಂಗಳವಾರ ಅಗಸ್ಟ್ 01, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 163 Pages : 4 Price : 3.00 Tuesday August 01, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗಳಿಗೆ ಶೇ.50 ರಿಯಾಯಿತಿ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 2023ರ ಆಗಸ್ಟ್ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇಖಡಾ 50%ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುವುದು. ಪುಸ್ತಕ ಪ್ರಿಯರು ಈ ಅವಕಾಶ ಬಳಸಿಕೊಳ್ಳಲು ಕೋರಿದೆ. ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್ www.kannadapustakapradhikara.com (ನಮ್ಮ ಪುಸ್ತಕಗಳ ವಿಭಾಗ) ನಲ್ಲಿ ಕೂಡ ಈ ಶೇ.50% ರಿಯಾಯಿತಿ ಲಭ್ಯವಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಈವರೆಗೆ ಪ್ರಕಟಿಸುತ್ತಾ ಬಂದಿದೆ. ಇವುಗಳಲ್ಲಿ ವ್ಯಕ್ತಿ ಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ, ಪರಿಸರ, ಕೃಷಿ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಇದುವರೆಗೆ ಸುಮಾರು 704 ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ. ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕರದ್ದಾಗಿದೆ ಎಂದು ಕನ್ನಡ ಪುಸ್ತಕ ಪ್ರಾದಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗದಗ ಜಿಲ್ಲೆಯ ಅಂಗಡಿ, ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನಲ್ಲಿರುವ ಎಲ್ಲ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ಹಾಗೂ ನಿಯಮಗಳ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಈಗಾಗಲೇ ನೋಂದಣಿ ಮಾಡಿಸಿಕೊಂಡ ಸಂಸ್ಥೆಗಳನ್ನು ಹೊರತುಪಡಿಸಿ ಉಳಿದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ಹಾಗೂ ಉದ್ದಿಮೆದಾರರು ಕಾರ್ಮಿಕ ನಿರೀಕ್ಷಕರ ಕಚೇರಿ, ಶಿರಹಟ್ಟಿ ವೃತ್ತ ಶಿರಹಟ್ಟಿ ಇಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. 15 ದಿನಗಳೊಳಗಾಗಿ ರಾಜ್ಯ ಸರ್ಕಾರದ ಇ-ಕಾರ್ಮಿಕ ತಂತ್ರಾಂಶದಲ್ಲಿ https://www.ekarmika.karnataka.gov.in/ekarmika/Static/Home.aspx ನಿಗದಿತ ಆನ್‌ಲೈನ್ ಮೂಲಕ ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಶಿರಹಟ್ಟಿ ವೃತ್ತದ ಕಾರ್ಮಿಕ ನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

## ನಿಧಾನಗತಿಯಲ್ಲಿ ಗ್ರಾಮ ಪಂಚಾಂಯಿತಿ ಕಾಮಗಾರಿ; ಸಚಿವ ಪಾಟೀಲ ಅಸಮಾಧಾನ



■ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರಿಂದ ಭಾನುವಾರದಂದು ಹುಲಕೋಟಿಯಲ್ಲಿ ನಿರ್ಮಿಸಲಾಗುತ್ತಿರುವ ನೂತನ ಗ್ರಾಮ ಪಂಚಾಯತ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿದರು.

ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ನಿಗದಿತ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳ್ಳಬೇಕು. ಹಾಗೂ ಕಾಮಗಾರಿಯು ಸಂಪೂರ್ಣವಾಗಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸುವ ಮೂಲಕ ಉತ್ತಮವಾಗಿ ನಿರ್ಮಾಣವಾಗುಬೇಕು ಎಂದು ಸಂಬಂಧಿತ ಅಧಿಕಾರಿ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಹುಲಕೋಟಿ ಗ್ರಾಮ ಪಂಚಾಯತ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರುಗಳು ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

## ಇಂದು ವ್ಯಸನ ಮುಕ್ತ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ ವ್ಯಸನಮುಕ್ತ ದಿನಾಚರಣೆ ಸಮಾರಂಭವನ್ನು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಆಗಸ್ಟ್ 1 ರಂದು ಬೆ.10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಮಾರಂಭದ ಘನ ಉಪಸ್ಥಿತಿ ವಹಿಸುವರು. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಸಮಾರಂಭವನ್ನು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಸರಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ನರಗುಂದ ಶಾಸಕ ಸಿ.ಸಿ.ಪಾಟೀಲ, ವಿಧಾನ ಪರಿಷತ್ ಸದಸ್ಯರುಗಳಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ತಜ್ಞರಾದ ಡಾ.ರಾಘವೇಂದ್ರ ಪಾಟೀಲ ಉಪನ್ಯಾಸ ನೀಡಲಿದ್ದಾರೆ. ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಹಾಗೂ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಸ್.ಶಂಕರಪ್ಪ ಸರ್ವರಿಗೂ ಸ್ವಾಗತ ಕೋರಿದ್ದಾರೆ.

### ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ

# ಮಾನವ ಕಳ್ಳ ಸಾಗಾಣಿಕೆಗೆ ಕಠಿಣ ಶಿಕ್ಷೆ



■ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿ ವರ್ಷವೂ ಜುಲೈ 31ರಂದು ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆಯನ್ನು ಆಚರಣೆ ಮಾಡುತ್ತಾ ಬಂದಿದೆ. ವಿಶ್ವ ಮಟ್ಟದಲ್ಲಿ ಆಚರಣೆ ಮಾಡುವ ಮೂಲಕ ಮಾನವ ಕಳ್ಳ ಸಾಗಾಣಿಕೆ ತಡೆಯುವ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಹೇಳಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಯೋಗದಲ್ಲಿ ಸೋಮವಾರ ನಗರದ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುಲಾಮಗಿರಿ ಪದ್ಧತಿ ನಿಷೇಧ ಇದ್ದು, 2013 ರಲ್ಲಿ ಕಾಯ್ದೆ ಸುಧಾರಣೆಯಾಗಿದ್ದು ಕಾನೂನು ಉಲ್ಲಂಘಿಸಿದರೆ ತುಂಬಾ ಕಠಿಣ ಶಿಕ್ಷೆ ಇದೆ. ಮಾನವ ಕಳ್ಳ ಸಾಗಾಣಿಕೆ ವಿವಿಧ ರೀತಿಯಲ್ಲಿದ್ದು, ಲೈಂಗಿಕ ಚಟುವಟಿಕೆಗಳಿಗೆ ಬಳಸುವುದು, ಭಿಕ್ಷೆ ಬೇಡಲು ಹಚ್ಚುವುದು, ಸಂಬಳ ಕೊಡದೇ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದು, ಶರೀರದ ಅಂಗಗಳನ್ನು ಹೊರತೆಗೆದು ಮಾರುವುದು ಇವೆಲ್ಲವುಗಳು ಮಾನವ ಕಳ್ಳ ಸಾಗಾಣಿಕೆಯ ಅನೇಕ ಆಯಾಮಗಳನ್ನು ಹೊಂದಿದೆ ಎಂದರು.

ಕಳೆದ 5 ವರ್ಷದಲ್ಲಿ 3234 ವರದಿಗಳು ಬೆಳಕಿಗೆ ಬಂದಿವೆ. ಇಂತಹ ಕ್ರೌರ್ಯದಲ್ಲಿ ತೊಡಗಿದವರಿಗೆ ಕಾನೂನು ನಿಯಮದ ಪ್ರಕಾರ 7 ರಿಂದ 10 ವರ್ಷಗಳ ಜೈಲುವಾಸ ಹಾಗೂ ದಂಡವನ್ನು ವಿಧಿಸಲಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾನವ ಕಳ್ಳ ಸಾಗಾಣಿಕೆಯ ತಡೆಗಟ್ಟುವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಲಾಯಿತು.



> ಮಾನವ ಕಳ್ಳ ಸಾಗಾಣಿಕೆ ತುಂಬಾ ಕೆಟ್ಟ ಕೆಲಸವಾಗಿದ್ದು ಅವರನ್ನು ಗುಲಾಮಗಿರಿಗೆ ಬಳಕೆ ಮಾಡುವುದು ದುರಾದೃಷ್ಟವಾಗಿದೆ. ಹಾಗೂ ಮಕ್ಕಳನ್ನು ನಿಧಿ ಆಸೆಗಾಗಿ ವಾಮಾಚಾರ ಮಾಡುವುದು. ಇಂತಹ ಕಾರ್ಯಗಳಿಗೆ ಮಕ್ಕಳನ್ನು ಬಳಸುವವರಿಗೆ ಗಂಭೀರವಾಗಿ ಪರಿಗಣಿಸಿ ಈ ಅಪರಾಧದಲ್ಲಿ ತೊಡಗಿದ ಅಪರಾಧಿಗಳಿಗೆ ಕಾನೂನು ಪ್ರಕಾರ ಶಿಕ್ಷೆಗೆ ಗುರಿ ಮಾಡಬೇಕಿದೆ.
>
> –ವೈಶಾಲಿ.ಎಂ.ಎಲ್. ಜಿಲ್ಲಾಧಿಕಾರಿಗಳು, ಗದಗ

ಪೊಲೀಸ್ ಇಲಾಖೆ ಸಿಬ್ಬಂದಿ ಎಂ.ಎಂ.ಅಸೂಟಿ ಅವರು ಉಪನ್ಯಾಸ ನೀಡುತ್ತಾ, ಮಾನವ ಕಳ್ಳ ಸಾಗಾಣಿಕೆಯು ▸▸3ನೇ ಪುಟಕ್ಕೆ

### ಪಕ್ಕಾ ಲೆಕ್ಕಾಚಾರದೊಂದಿಗೆ ವೈದ್ಯರ ಮನೆ ದೋಚಿದ ಕಳ್ಳರು: 5 ಕೆಜಿಗೂ ಮೀರಿದ ಬೆಳ್ಳಿ ವಸ್ತುಗಳ ಲೂಟಿ

# ತವರಿನ ಪ್ರೀತಿಯ ಬಳುವಳಿಯನ್ನೇ ಕದ್ದ ಕಳ್ಳರು

> ಕಳುವಾದ ಸ್ವತ್ತು, ಅದರ ಮೌಲ್ಯವೆಷ್ಟು ಎಂಬುದಕ್ಕಿಂತ, ಹುಟ್ಟಿ ಬೆಳೆದ ತವರು ಮನೆಯ ಪ್ರೀತಿಯ ಉಡುಗೊರೆಗಳನ್ನು ಕಳ್ಳರು ದೋಚಿರುವ ನೋವು, ವಿಷಾದ ಡಾ. ಚೆನ್ನಮ್ಮ ರೆಡ್ಡಿಯವರ ಮುಖದಲ್ಲಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಧಾರವಾಡದಿಂದ ಧಾವಿಸಿ ಬಂದ ಡಾ. ಚೆನ್ನಮ್ಮ ಅವರ ತಾಯಿಯ ನೋವು ಕೂಡ ಇದೇ ಆಗಿತ್ತು. 'ಮದುವೆಯ ಸಂದರ್ಭದಲ್ಲಿ ತವರಿನ ನೆನಪಿಗೆಂದು ಪ್ರೀತಿಯಿಂದ ನೀಡಿದ್ದ ಉಡುಗೊರೆಗಳು ಯಾರೋ ಕಳ್ಳರ ಪಾಲಾಯ್ತಲ್ಲಾ ಸರ್...' ಎಂದು ಗೋಳಾಡುತ್ತಿರುವ ದೃಶ್ಯ ಮನ ಕಲಕುವಂತಿತ್ತು.

■ವಿಜಯಸಾಕ್ಷಿ ಸುದ್ದಿ, ಗದಗ

ಅಕ್ಕ ಬಂದಿದ್ದಾಳೆಂದು ಮನೆಗೆ ಬೀಗ ಹಾಕಿ ಖುಷಿಯಿಂದ ಧಾರವಾಡದ ತವರು ಮನೆಗೆ ತೆರಳಿ, ಹಿಂದಿರುಗಿ ಬಂದು, ಗೇಟ್ ತೆರೆದು ಮನೆಯ ಬಾಗಿಲ ಬಳಿ ಬರುತ್ತಿದ್ದಂತೆಯೇ ಆ ದಂಪತಿಗೆ ಆಘಾತ ಕಾದಿತ್ತು. ಮನೆಯ ಬೀಗ ಮುರಿದಿತ್ತು. ಹಾಗೇ ಬಾಗಿಲು ತೆರೆದು ಒಳಕ್ಕೆ ಪ್ರವೇಶಿಸಿದರೆ ಮನೆಯೊಳಗೆ ಇದ್ದ ವಸ್ತುಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿತ್ತು. ಇಡೀ ಮನೆ ಲೂಟಿಯಾಗಿತ್ತು.



ಗದಗ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯ ದೋಭಿ ಘಾಟ್ ಬಳಿ ನಡೆದಿರುವ ಘಟನೆ ಇಡೀ ನಗರವನ್ನು ಬೆಚ್ಚಿಬೀಳಿಸಿದೆ. ಗದಗ ನಗರದ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಚೆನ್ನಮ್ಮ ರೆಡ್ಡಿಯವರ ಮನೆ ಲೂಟಿಯಾಗಿದೆ. ಮುದ್ದಿನ ಮಗಳಿಗಾಗಿ ತವರು ಮನೆಯಿಂದ ತಾಯಿ ಉಡುಗೊರೆಯಾಗಿ ಕೊಟ್ಟಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಬೆಳ್ಳಿಯ ವಸ್ತುಗಳೂ ಸೇರಿದಂತೆ ಬೆಲೆಬಾಳುವ ವಸ್ತುಗಳು ಕಳ್ಳತನವಾಗಿದೆ.

ಡಾ. ಚೆನ್ನಮ್ಮ ರೆಡ್ಡಿಯವರ ತವರು ಮನೆ ಧಾರವಾಡ. 15 ವರ್ಷಗಳ ಹಿಂದೆ ಮದುವೆಯಾಗಿ ಗದುಗಿನಲ್ಲಿ ವಾಸವಿದ್ದರು. ತವರಿನಿಂದ ಅಕ್ಕ ಬಂದಿದ್ದಾಳೆ ಎಂದು ಫೋನ್ ಬಂದಾಗ, ಮನೆಗೆ ಬೀಗ ಹಾಕಿ ಪತಿ, ಪತ್ನಿ ಶನಿವಾರ ಸಂಜೆ ಧಾರವಾಡಕ್ಕೆ ಹೋಗಿದ್ದಾರೆ. ಆದರೆ, ಭಾನುವಾರ ಧಾರವಾಡದಿಂದ ವಾಪಸ್ ಬಂದು ಗೇಟ್ ತೆರೆದು ಮನೆಯೊಳಗೆ ಹೋಗುತ್ತಿದ್ದಂತೆ ಕಳ್ಳತನ ನಡೆದಿರುವುದು ಕಂಡುಬಂದಿದೆ. ಮನೆಯ ಬೆಡ್‌ರೂಂನಲ್ಲಿದ್ದ ಟ್ರೆಝುರಿಯ ಬಾಗಿಲನ್ನು ಕಬ್ಬಿಣದ ರಾಡ್‌ನಿಂದ ಮೀಟಿ ಮುರಿಯಲಾಗಿದೆ. ಡಾ.ಚೆನ್ನಮ್ಮ ರೆಡ್ಡಿ ಮದುವೆಯಲ್ಲಿ ತವರು ಮನೆಯವರು ಮದುವೆಯ ಸಂದರ್ಭದಲ್ಲಿ ಬಳುವಳಿಯಾಗಿ ಕೊಟ್ಟಿದ್ದ ಎಲ್ಲ ಬೆಳ್ಳಿ ವಸ್ತುಗಳು ಲೂಟಿಯಾಗಿವೆ.

ಬೆಳ್ಳಿ ಕೊಡ, ಬೆಳ್ಳಿ ತಾಟುಗಳು, ತಂಬಿಗೆಗಳು, ಆರತಿ ತಟ್ಟೆ ಸೇರಿ 5ಕೆಜಿಗೂ ಅಧಿಕ ತೂಕದ ಲಕ್ಷಾಂತರ ರೂ. ಮೌಲ್ಯದ ಬೆಳ್ಳಿ ವಸ್ತುಗಳನ್ನು ತವರಿನ ಉಡುಗೊರೆಗಳೆಂದು 15 ವರ್ಷಗಳಿಂದಲೂ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದರು. ವಿಷಯ ತಿಳಿದ ತಕ್ಷಣ ಗದಗ ಗ್ರಾಮೀಣ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಬೆರಳಚ್ಚು ತಜ್ಞರು, ಶ್ವಾನದಳದಿಂದಲೂ ಪರಿಶೀಲನೆ ನಡೆಸಲಾಗಿದೆ.

ಮನೆ ನಗರದ ಹೊರವಲಯದಲ್ಲಿರುವುದರಿಂದ ಕಳ್ಳರು ಕರಾರುವಾಕ್ಕಾಗಿ ಯೋಜನೆ ರೂಪಿಸಿಯೇ ಲೂಟಿ ಮಾಡಿದ್ದಾರೆ ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ. ಕಳ್ಳರು ಮನೆ ಲೂಟಿ ಮಾಡಿ, ಹಿಂದಿರುಗಿ ಹೋದ ದಿಕ್ಕನ್ನು ಶ್ವಾನದಳದ ಶ್ವಾನಗಳು ಸೂಚಿಸಿದ್ದು, ಕಳ್ಳರ ಶೋಧಕ್ಕೆ ಗ್ರಾಮೀಣ ಠಾಣೆಯ ಪೊಲೀಸರು ಬಲೆ ಬೀಸಿದ್ದಾರೆ.

## ಯೂರಿಯಾ ರಸಗೊಬ್ಬರಕ್ಕೆ ಬದಲಾಗಿ ನ್ಯಾನೋ ಯೂರಿಯಾ ಬಳಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಸಾಕಷ್ಟು ಮಳೆಯಾಗಿರುವ ಕಾರಣದಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿದ್ದು, ಗೋವಿನಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ, ಹತ್ತಿ ಹಾಗೂ ಇತರೆ ಬೆಳೆಗಳಿಗೆ ರೈತರು ಯೂರಿಯಾ ಗೊಬ್ಬರವನ್ನು ಮೇಲು ಗೊಬ್ಬರವಾಗಿ ಬಳಸುತ್ತಿದ್ದು, ಯೂರಿಯಾ ರಸಗೊಬ್ಬರ ಪರ್ಯಾಯವಾಗಿ ಒಂದು ಎಕರೆ ಬೆಳೆಗೆ ಸುಮಾರು 500 ಮೀ.ಲೀ ನ್ಯಾನೋ ಯೂರಿಯಾ ಬಳಸಬೇಕು.

ಬೆಳೆಗಳಿಗೆ ಹರಳು ರೂಪದ ಯೂರಿಯಾ ಬಳಸುವುದರಿಂದ ಬೇಕಾದ ಪೋಷಕಾಂಶಗಳು ಕೇವಲ ಶೇ. 50 ರಷ್ಟು ಮಾತ್ರ ದೊರೆಯುವ ಸಾಧ್ಯತೆ ಇರುತ್ತದೆ. ಹಾಗೂ ಉಳಿದ ಪೋಷಕಾಂಶಗಳು ನೀರಿನ ಹರಿವಿಕೆಯಿಂದ ಪೋಲಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಚಿಕ್ಕ ಗಾತ್ರದ ಕಣಗಳನ್ನು ಹೊಂದಿರುವ ನ್ಯಾನೋ ಯೂರಿಯಾ (20–50 nm ) ಬಳಸುವುದರಿಂದ ಬೆಳೆಗಳಿಂದ ಶೇ. 80 ರಷ್ಟು ಪೋಷಕಾಂಶಗಳು ಉಪಯುಕ್ತವಾಗುತ್ತದೆ. ನ್ಯಾನೋ ಯೂರಿಯಾ ಪ್ರಧಾನ ಪೋಷಕಾಂಶವಾದ ಸಾರಜನಕದ ಮೂಲ ದ್ರವರೂಪ ಗೊಬ್ಬರವಾಗಿದ್ದು, ಇದರ ಬಳಕೆಯಿಂದ ಬೆಳೆಗಳಲ್ಲಿ ಕಳೆ ನಿರ್ವಹಣೆಯಾಗುವುದರ ಜೊತೆಗೆ ಉತ್ತಮ ಬೆಳವಣಿಗೆಗೆ ಅನುಕೂಲ ಮಾಡುತ್ತದೆ. ನ್ಯಾನೋ ಯೂರಿಯಾದಲ್ಲಿನ ಸಾರಜನಕವು ಸಸ್ಯಗಳಲ್ಲಿ Hydrolyṣi ಆಗಿ Ammonical ಮತ್ತು Nitrate ರೂಪದಲ್ಲಿ ಪರಿವರ್ತನೆಗೊಳ್ಳುತ್ತದೆ.

ಬೆಳೆಗಳಿಗೆ ಬೇಕಾಗಿರುವ ಸಾರಜನಕವನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುತ್ತದೆ ಮತ್ತು ಇತರೆ ಪೋಷಕಾಂಶವನ್ನು ತೆಗೆದುಕೊಳ್ಳುವ ಸಂಯೋಜಿತ ಮಾರ್ಗವನ್ನು ಪ್ರಚೋದಿಸುತ್ತದೆ. ನ್ಯಾನೋ ▸▸3ನೇ ಪುಟಕ್ಕೆ

## ಗೋಡಂಬಿ ಬೆಳೆಯ ಹೊಸ ಪ್ರದೇಶ ವಿಸ್ತರಣೆಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಜಿಲ್ಲೆಯ ವಿವಿಧ ಭಾಗಗಳಲ್ಲಿ ಹಲವಾರು ರೈತರು ಕೆಂಪು ಮಣ್ಣಿನಲ್ಲಿ ಗೋಡಂಬಿ ಬೆಳೆಯನ್ನು ಯಶಸ್ವಿಯಾಗಿ ಬೆಳೆದು ಉತ್ತಮ ಇಳುವರಿ ಪಡೆಯುತ್ತಿದ್ದಾರೆ. ತೋಟಗಾರಿಕೆ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಜಿಲ್ಲೆಯ ರೈತರಿಗೆ ಗೋಡಂಬಿ ಬೆಳೆಯನ್ನು ಬೆಳೆಯಲು ಕೊಚ್ಚಿಯ ಗೇರು ಹಾಗೂ ಕೊಕೊ ನಿರ್ದೇಶನಾಲಯದ ಪ್ರಾಯೋಜಕತ್ವದಲ್ಲಿ ಸಹಾಯಧನ ಸೌಲಭ್ಯ ನೀಡಲಾಗುತ್ತಿದೆ.



ಆಸಕ್ತ ರೈತರಿಗೆ ನಿರ್ದೇಶನಾಲಯದ ವತಿಯಿಂದ ಉಚಿತವಾಗಿ ಗೋಡಂಬಿ ಗಿಡಗಳನ್ನು ವಿತರಿಸಲಾಗುವುದು. ಸಹಾಯಧನ ಪಡೆಯಲಿಚ್ಛಿಸುವ ಆಸಕ್ತ ರೈತರು ನಿಗದಿತ ನಮೂನೆಯ ಅರ್ಜಿ, ಪಹಣಿ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಪಾಸ್‌ಪೋರ್ಟ್ ಅಳತೆಯ ಫೋಟೋ ಹಾಗೂ ಮಣ್ಣು ಮತ್ತು ನೀರಿನ ಪರೀಕ್ಷಾ ವರದಿಯೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ), ಶಿರಹಟ್ಟಿ ಕಛೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಗೋಡಂಬಿ ಉತ್ತಮ ಭವಿಷ್ಯದ ಬೆಳೆ, ಉತ್ತಮ ಆದಾಯ ನೀಡುವ ಬೆಳೆಯಾಗಿದ್ದು, ರೈತರು ಇದರ ಲಾಭವನ್ನು ಪಡೆಯಬೇಕೆಂದು ಶಿರಹಟ್ಟಿಯ ಸಹಾಯಕ ಹಿರಿಯ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಸಾಕ್ಷಿ ಸುಭಾಷಿತ

**ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ**

**–ಬಿ.ಎಂ. ಶ್ರೀ**

## ಸಂಪಾದಕೀಯ

# ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ...

ಕರ್ನಾಟಕ ವಿಧಾನಸಭೆ ಚುನಾವಣೆ ನಂತರವೂ ಬಿಜೆಪಿ, ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ಮನಸ್ಥಿತಿಯಲ್ಲಿಯೇ ಇದೆ. ಅದರಲ್ಲೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬುದ್ಧಿ ಕಲಿತಂತೆ ಕಾಣುತ್ತಿಲ್ಲ.

ರಾಜ್ಯದಲ್ಲಿ ಬಿಜೆಪಿಯ ಇಂದಿನ ಹೀನಾಯ ಸ್ಥಿತಿಗೆ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕಾರಣವಾಗಿದ್ದರು ಅವರು ಇನ್ನೂ ಎಚ್ಚೆತ್ತುಕೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಲು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿದ್ದರು, ಕಟೀಲ್ ಮಾತ್ರ ಆ ಮೂಡಿನಿಂದ ಹೊರಬಂದಂತೆ ಕಾಣುತ್ತಿಲ್ಲ.

ಶಿಸ್ತಿನ ಪಕ್ಷದ ರಾಜ್ಯಾಧ್ಯಕ್ಷರಾಗಿರುವ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಆರೋಪ ಮಾಡಿದ್ದಾರೆ. ಸಿದ್ದರಾಮಯ್ಯ ಜಿಹಾದಿಗಳ ಜೊತೆಗೆ ಕೈಜೋಡಿಸಿದ್ದಾರೆ ಎನ್ನುವ ಅರ್ಥದಲ್ಲಿ ಮಾತನಾಡಿರುವುದು ಈಗ ವಿವಾದಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಹಿಂದೂ ಮುಸ್ಲಿಮರು ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದಾರೆ. ಆ ಕಾರಣಕ್ಕಾಗಿಯೇ ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್ಸಿಗೆ ಮತ ನೀಡಿದ್ದಾರೆ. ಮುಸ್ಲಿಮರ ಮತಗಳಿಂದ ಮಾತ್ರ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಬಹುಸಂಖ್ಯಾತ ಹಿಂದೂಗಳು ಸಹ ಕಾಂಗ್ರೆಸ್ಸಿಗೆ ಮತ ನೀಡಿದ್ದಾರೆ ಎನ್ನುವುದನ್ನು ನಳಿನ್ ಕುಮಾರ್ ಅರ್ಥಮಾಡಿಕೊಳ್ಳಬೇಕಿದೆ.

ಆದರೂ ನಳೀನ್ ಕುಮಾರ್ ಕಟೀಲ್, ಸೌಹಾರ್ದ ಕದಡುವಂತಹ ಹೇಳಿಕೆ ನೀಡುತ್ತಿದ್ದಾರೆ. ಆ ಮೂಲಕ ತಾವು ಹಿಂದೂಗಳ ಪರವಾಗಿದ್ದಾರೆ ಎಂದು ಪ್ರಚಾರ ಗಿಟ್ಟಿಸಿಕೊಳ್ಳುವ ಉಮೇದಿಯಲ್ಲಿದ್ದಾರೆ. ರಾಜ ರಾಜಕಾರಣದಲ್ಲಿ ಸಕ್ರಿಯರಾಗಿದ್ದರೆ ಇಂತಹ ಹೇಳಿಕೆ ನೀಡುತ್ತಿರಲಿಲ್ಲ. ರಾಜ್ಯ ರಾಜಕಾರಣದಲ್ಲಿರುವ ಬಿಜೆಪಿಯ ಯಾವೊಬ್ಬ ನಾಯಕನೂ ಸಹ ಇಂತಹ ಹೇಳಿಕೆ ನೀಡುವುದಿಲ್ಲ. ಕಾರಣ ದ್ವೇಷದಿಂದ ರಾಜಕಾರಣ ಮಾಡಲು ಸಾಧ್ಯವಿಲ್ಲ ಎನ್ನುವ ಸತ್ಯವನ್ನು ಅರಿತುಕೊಂಡಿದ್ದಾರೆ. ಆದರೆ ಈ ಸತ್ಯವನ್ನ ಬಿಜೆಪಿಯ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅರ್ಥ ಮಾಡಿಕೊಳ್ಳದಿರುವುದು ವಿಪರ್ಯಾಸ. ಜಗತ್ತಿನ ಅತಿ ದೊಡ್ಡ ರಾಜಕೀಯ ಪಕ್ಷದ ರಾಜ್ಯಾಧ್ಯಕ್ಷರಾಗಿರುವ ನಳಿನ್ ಕುಮಾರ್ ಕಟೀಲ್, ಇಂತಹ ಲಗುವಾದ ಹೇಳಿಕೆ ನೀಡುವದನ್ನ ಬಿಟ್ಟು ಸರ್ಕಾರದ ವಿರುದ್ಧ ಗಂಭೀರವಾದ ಆರೋಪಗಳನ್ನ ಮಾಡುವುದನ್ನು ರೂಢಿಸಿಕೊಳ್ಳಬೇಕು. ಆಡಳಿತ ಪಕ್ಷದ ವೈಫಲ್ಯಗಳನ್ನು ಜನರ ಮುಂದಿಡುವಂತಹ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಆಯ್ಕೆ ಬಗ್ಗೆ ಹೆಚ್ಚು ಗಮನ ಕೇಂದ್ರೀಕರಿಸುವುದು ಅಗತ್ಯವಾಗುದೆ. ಆ ನಿಟ್ಟಿನಲ್ಲಿ ಕಟೀಲ್ ಯೋಚಿಸದಿದ್ದರೆ, ಲೋಕಸಭೆ ಚುನಾವಣೆಯಲ್ಲೂ ಅದರ ಪರಿಣಾಮ ಎದುರಿಸಬೇಕಾಗುತ್ತದೆ.

**ಆಗಸ್ಟ್ 01 ರಿಂದ 07 ರವರೆಗೆ 'ವಿಶ್ವ ಸ್ತನ್ಯಪಾನ ಸಪ್ತಾಹ' ತನ್ನಿಮಿತ್ತ ವಿಶೇಷ ಲೇಖನ**

# ಮಗುವಿಗೆ ತಾಯಿಯ ಹಾಲೇ ಅಮೃತ




"ಸ್ತನ್ಯಪಾನವು ತನಗೆ, ತನ್ನ ಮಗುವಿಗೆ ಮತ್ತು ಭೂಮಿಗೆ, ಮಹಾತಾಯಿಯ ಕೊಡುಗೆಯಾಗಿದೆ"– ಎಂದು ಪಮೇಲಾ ಕೆ. ವಿಗ್ಗಿನ್ಸ್ ಹೇಳಿದ ಹಾಗೆ ಪ್ರಪಂಚದಲ್ಲಿ ತಾಯಿಯು ತನ್ನ ಮಕ್ಕಳಿಗಾಗಿ ನೀಡುವ ಜೀವ ದ್ರವ್ಯ ಯಾವುದೆಂದರೆ ಅದುವೇ ಅಮ್ಮನ ಎದೆಹಾಲು.ಇದು ತಾಯಿಯ ಎದೆಯಲ್ಲಿ ಯಾವಾಗಲೂ ತುಂಬಿರುತ್ತದೆ ಮತ್ತು ಹರಿಯುತ್ತದೆ ಕಾರಣ ಅವಳು ದೈವಿ ಸ್ವರೂಪಳು. ಮಕ್ಕಳಿಗೆ ಹಾಲುಣಿಸುವಿಕೆಯಿಂದ ಹಾಲು ಪಡೆಯುವುದು ಅಷ್ಟೇ ಅಲ್ಲ, ಅವರು ಅದರಿಂದ ಶಕ್ತಿಯನ್ನು ಸಹ ಪಡೆಯುತ್ತಾರೆ.ಜಾಗತಿಕ ಸ್ತನ್ಯಪಾನ ಸಂಸ್ಕೃತಿಯನ್ನು ಪುನಃಸ್ಥಾಪಿಸಲು ಮತ್ತು ಎಲ್ಲೆಡೆ ಸ್ತನ್ಯಪಾನಕ್ಕೆ ಬೆಂಬಲವನ್ನು ನೀಡುವ ಗುರಿ ಉದ್ದೇಶಕ್ಕಾಗಿ ವಿಶ್ವದಾದ್ಯಂತ ಸ್ತನ್ಯಪಾನದ ಮಹತ್ವ ಹಾಗೂ ಉಪಯೋಗಗಳನ್ನು ತಿಳಿಸಲು ಪ್ರತಿ ವರ್ಷ ಆಗಸ್ಟ್ 01 ರಿಂದ 07 ರವರೆಗೆ "ವಿಶ್ವ ಸ್ತನ್ಯಪಾನ ಸಪ್ತಾಹ" ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ.

ಮಗು ಜನಿಸಿದ ಮೊದಲ ಆರು ತಿಂಗಳ ಕಾಲ ವಿಶೇಷ ಎದೆ ಹಾಲುಣಿಸುವಿಕೆಯನ್ನು ಉತ್ತೇಜಿಸುವ ಗುರಿಯೊಂದಿಗೆ ಫೆಬ್ರವರಿ 14,1991ರಲ್ಲಿ ಮೊದಲ ಬಾರಿಗೆ ಸ್ತನ್ಯಪಾನ ಸಪ್ತಾಹ ಆರಂಭಿಸಲಾಯಿತು. ಈಗ ಯುನಿಸೆಫ್ ನಿಂದ 120 ಕ್ಕೂ ಹೆಚ್ಚಿನ ರಾಷ್ಟಗಳಲ್ಲಿ ಈ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ವ್ಯಕ್ತಿ ಸಂಘಟನೆಗಳು ಹಾಗೂ ಸರ್ಕಾರಗಳು ಸೇರಿದಂತೆ ಇತರ ಪೋಷಕ ಸಂಸ್ಥೆಗಳು ಈ ನಿಟ್ಟಿನಲ್ಲಿ ಭಾಗವಹಿಸುತ್ತವೆ ಎಂದು ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದ ಇತಿಹಾಸ ಹೇಳುತ್ತದೆ.

**ಸ್ತನ್ಯಪಾನದ ಮಹತ್ವ:**

ತಾಯಿಯ ಹಾಲು ಅಪರಂಜಿ. ಇದು ಮಗುವಿನ ಆರೋಗ್ಯ ರಕ್ಷಣೆ ಹಾಗೂ ಪೋಷಣೆ ನೀಡುವ ಏಕೈಕ ಆಹಾರ. ಆದ್ದರಿಂದ ತಾಯಿ ಎದೆಹಾಲಿನಲ್ಲಿ ಶಿಶುವಿನ ಸದೃಢ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳು,ಜೀವಸತ್ವಗಳು, ಖನಿಜಾಂಶಗಳು ಅಡಕವಾಗಿವೆ. ಮೊದಲ ಆರು ತಿಂಗಳಲ್ಲಿ ತಾಯಿಯ ಎದೆಹಾಲು ಶಿಶುವಿಗೆ ಅಮೃತಕ್ಕೆ ಸಮಾನ.ತಾಯಿಯ ಎದೆಹಾಲು ಮಗುವಿಗೆ ಮೊದಲನೆಯ ಲಸಿಕೆ.ಎರಡು ವರ್ಷದೊಳಗಿನ ಮಕ್ಕಳಿಗೆ ಸಂಪೂರ್ಣ ಆರೋಗ್ಯಕರ ಆಹಾರವಾಗಿದೆ. ಮಕ್ಕಳ ಬದುಕುವಿಕೆಯ ಮೇಲೆ ಹೆಚ್ಚಿನ ಸಕಾರಾತ್ಮಕ ಪರಿಣಾಮ ಹೇರುತ್ತದೆ. ಮೊದಲ ಮೂರು ದಿನದ ಹಾಲಿಗೆ ಹೆಚ್ಚು ರೋಗ ನಿರೋಧಕವಾಗಿದ್ದು ಮಗುವಿಗೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.ಸ್ತನ್ಯಪಾನವು ತಾಯಿ ಮತ್ತು ಮಗುವಿನ ನಡುವಿನ ಬಾಂಧವ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

**ಸ್ತನ್ಯಪಾನದ ಲಾಭಗಳು:**

ಮಗು–ತಾಯಿಯ ಆರೋಗ್ಯಕ್ಕಾಗಿ ಎದೆಹಾಲಿನ ಮಹತ್ವದ ಕುರಿತು ತಾಯಂದಿರಲ್ಲಿ ಅರಿವು ಮೂಡಿಸಿ ಡಬ್ಬಿ ಹಾಲಿನ ಮೋಹ ದೂರ ಮಾಡುವುದು ಮತ್ತು ಅತಿಸಾರಭೇದಿ, ಜಂತುಹುಳು ತಡೆಗಾಗಿ ಜಾಗೃತಿ ಮೂಡಿಸುವ ಮೂಲಕ ಶಿಶುಮರಣ ಹಾಗೂ ಅನಿಮಿಯ ಮುಕ್ತ ಭಾರತಕ್ಕೆ ತಳಹದಿ ಹಾಕೋಣ.

**ತಾಯಿ ಹಾಲೇ ಉತ್ಕೃಷ್ಟವೇಕೆ?**

ತಾಯಿಯ ಎದೆ ಹಾಲು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ.

ತಾಯಿಯ ಎದೆ ಹಾಲು ತಾಯಿ ಮಗುವಿನ ಬಾಂಧವ್ಯವನ್ನು ಹೆಚ್ಚಿಸುತ್ತದೆ. ತಾಯಿಯ ಎದೆ ಹಾಲು ಮಗುವಿಗೆ ಮೊದಲನೆಯ ಲಸಿಕೆಯಾಗಿದೆ.ತಾಯಿಯ ಎದೆ ಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿ ಮೇಲೆ ಮತ್ತೊಂದು ಇಲ್ಲ.ಅಮ್ಮನ ಹಾಲು ಸ್ವಚ್ಛ, ಸುರಕ್ಷಿತ,ಅಷ್ಟೇ ರುಚಿಕಟ್ಟಾಗಿರುತ್ತದೆ.ಮಗುವಿಗೆ ನೀಡುವ ಚುಚ್ಚು ಮದ್ದಿಗಿಂತ ಹೆಚ್ಚು ಶಕ್ತಿಶಾಲಿ ಅಮ್ಮನ ಎದೆ ಹಾಲು.

ಒಟ್ಟಾರೆಯಾಗಿ ತಾಯಿಯ ಎದೆ ಹಾಲು ಮಗುವಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ.ಸ್ತನ್ಯಪಾನ ಶಿಶು ಮರಣ ತಗ್ಗಿಸುತ್ತದೆ.ಸ್ತನ್ಯಪಾನ ಮಾತೆಯ ಮಮತೆಯ ಪ್ರತೀಕ ಆದ್ದರಿಂದ ಹೆರಿಗೆ ಆದ ಅರ್ಧಗಂಟೆಯೊಳಗೆ ಮೂಢನಂಬಿಕೆಗಳಿಗೆ ಬಲಿಯಾಗದೇ ಕಡ್ಡಾಯವಾಗಿ ಮಗುವಿಗೆ ಎದೆಹಾಲು ಕುಡಿಸಬೇಕು, ಎದೆಹಾಲು ನೀಡುವುದರಿಂದ ಸ್ತನ ಕ್ಯಾನ್ಸರ್ ನಿಯಂತ್ರಣ, ಮಕ್ಕಳ ಆರೋಗ್ಯ ಸುಧಾರಣೆ, ರಕ್ತಸ್ರಾವ ತಡೆ ಸಾಧ್ಯವಾಗುತ್ತದೆ.

**"ಬಾಟಲಿಗಳು ಅವನ ಹೊಟ್ಟೆಯನ್ನು ತುಂಬುತ್ತವೆ, ಆದರೆ ಸ್ತನ್ಯಪಾನವು ಅವನ ಆತ್ಮವನ್ನು ತುಂಬುತ್ತದೆ."** ಎಂದು – ಡಯೇನ್ ವೈಸಿಂಗರ್ ಹೇಳಿದ ಮಾತು ಅಕ್ಷರಶಃ ಸತ್ಯ.



**–ಬಸವರಾಜ ಎಮ್ ಯರಗುಪ್ಪಿ**
**–ಬಿ ಆರ್ ಪಿ ಶಿರಹಟ್ಟಿ**
ಲಕ್ಷ್ಮೇಶ್ವರ

### ಮಗುವಿಗೆ ಹಾಲುಣಿಸುವಿಕೆಯಿಂದ ತಾಯಿಗೇನು ಉಪಯೋಗ?

*ದೇಹದ ತೂಕ ಇಳಿಸುವುದರಲ್ಲಿ ಸಹಕಾರಿ.
*ಹೃದಯದ ಆರೋಗ್ಯಕ್ಕೆ ಸಹಕಾರಿ.
*ಸ್ತನ ಕ್ಯಾನ್ಸರ್ ಮತ್ತು ಅಂಡಾಶಯ ಕ್ಯಾನ್ಸರ್ ಬರುವ ಸಂಭವನೀಯತೆ ಕಡಿಮೆ.
*ಖಿನ್ನತೆ ಕಡಿಮೆ ಮಾಡುತ್ತದೆ.
ತಾಯಿಯ ಹಾಲು ಕುಡಿಯುವುದರಿಂದ ಮಗುವಿಗೇನು ಉಪಯೋಗ?
* ತಾಯಿಹಾಲಿನಲ್ಲಿ ಕಡಿಮೆ ಪ್ರಮಾಣದ ಸಕ್ಕರೆ ಅಂಶ, ಕೊಬ್ಬಿನಂಶ ವಿರುತ್ತದೆ. ಮತ್ತು ಮಗುವಿಗೆ ಅಗತ್ಯವಿರುವಷ್ಟು ಪ್ರೊಟೀನ್, ಖನಿಜಾಂಶಗಳು ದೊರಕುತ್ತವೆ.
*ಸಾಮಾನ್ಯ ಹಾಲಿಗಿಂತ ತಾಯಿ ಹಾಲು ಬಹುಬೇಗನೆ ಜೀರ್ಣವಾಗುತ್ತದೆ.
* ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಶಿಶುಗಳು ನ್ಯುಮೋನಿಯಾ,ಡೈರಿಯಾದಂಥ ಸಮಸ್ಯೆಯಿಂದ ಸಾವನ್ನಪ್ಪುವುದನ್ನು ತಡೆಯುತ್ತದೆ.
*ಶಿಶು ಮರಣ ಪ್ರಮಾಣವನ್ನು ಕಡಿತಗೊಳಿಸಲು ಮಗುವಿಗಿಗೆ ಎರಡು ವರ್ಷ ತುಂಬುವವರೆಗೂ ತಾಯಿಹಾಲು ನೀಡುವುದು ಉತ್ತಮ.
*ಮಗು ಜೀವನದುದ್ದಕ್ಕೂ ಆರೋಗ್ಯವಂತವಾಗಿರುವುದಕ್ಕೆ ಇದು ಸಹಕರಿಸುತ್ತದೆ.
*ಉತ್ತಮ ಪೌಷ್ಟಿಕಾಂಶ ಲಭಿಸುತ್ತದೆ.ಇದರಿಂದಾಗಿ ಮಗುವು ಹೆಚ್ಚು ಆರೋಗ್ಯಯುತವಾಗಿರುತ್ತದೆ.
*ಬಾಲ್ಯದ ರೋಗಗಳಿಗೆ ಪ್ರತಿರಕ್ಷಣೆ ನೀಡುತ್ತದೆ.
*ಉನ್ನತ ಮಟ್ಟದ ಭೌತಿಕ ಮತ್ತು ಬೌದ್ಧಿಕ ಶಕ್ತಿ ಬೆಳೆಯುತ್ತದೆ.

### ಘೋಷಣೆಗಳು

*ಸ್ತನ್ಯಪಾನ ರಕ್ಷಣೆ;ಎಲ್ಲರ ಪಾಲಿನ ಜವಾಬ್ದಾರಿ.
*ಸ್ತನ್ಯಪಾನ ಬೆಂಬಲಿಸಿ;ಸದೃಢ ಜಗತ್ತು ನಿರ್ಮಿಸಿ.
*'ಸ್ತನ್ಯಪಾನವು ಜೀವಿತಾವಧಿಯಲ್ಲಿ ಉಳಿಯುವ ಒಂದೊಳ್ಳೆಯ ಉಡುಗೊರೆಯಾಗಿದೆ' ಎಂದು ಹೇಳಬಹುದು.
*ಜೀವನದ ಪೋಷಣೆಯಲ್ಲಿ ತಾಯಿಯ ಹಾಲು ಅಮೃತಕ್ಕಿಂತಲೂ ಮಿಗಿಲಾದದ್ದು.
*ಮಗುವಿಗೆ ತಾಯಿ ಎದೆ ಹಾಲು ನೀಡುವುದು ಪ್ರತೀ ಅಮ್ಮನ ಜವಾಬ್ದಾರಿ.

# ಕೆಎಸ್‌ಡಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಡಾ. ಪ್ರಶಾಂತ ನೇಮಕ



**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ರಾಜ್ಯದ ಪ್ರತಿಷ್ಠಿತ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿ., ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಪಟ್ಟಣದ ಡಾ.ಪ್ರಶಾಂತ ಪಿಕೆಎಂ ಐಎಫ್‌ಎಸ್ ನೇಮಕವಾಗಿದ್ದಾರೆ.

ಪಟ್ಟಣದ ನಿವೃತ್ತ ಶಿಕ್ಷಕ ದಿ. ಪಿಕೆಎಂ ಚನ್ನವೀರಸ್ವಾಮಿ ಅವರ ಪುತ್ರ ಪ್ರಶಾಂತ ಅವರು ಪ್ರಾಥಮಿಕ ಶಿಕ್ಷಣವನ್ನು ಪಟ್ಟಣದ ಸರ್ಕಾರಿ ಶಾಲೆಗಳಲ್ಲಿ ಪೂರೈಸಿದ್ದಾರೆ. ಪಿಯುಸಿ ಶಿಕ್ಷಣವನ್ನು ಪಟ್ಟಣದ ಉಜ್ಜಯನಿ ಜಗದ್ಗುರು ಕಾಲೇಜಿನಲ್ಲಿ ಮುಗಿಸಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೃಷಿ ಪದವಿಯನ್ನು ಪಡೆದು, ಬೆಂಗಳೂರಿನ ಜಿಕೆವಿಕೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಡಾಕ್ಟರೇಟ್ ಪದವಿಯನ್ನು ದೆಹಲಿಯ ಐಎಆರ್‌ಐ ಹಾಗೂ ಕುವೆಂಪು ವಿಶ್ವವಿದ್ಯಾಲಯದಲ್ಲಿ ವನ್ಯಜೀವಿ ಶಾಸ್ತ್ರದಲ್ಲಿ ಪಡೆದಿದ್ದಾರೆ.

# ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮ



**■ವಿಜಯಸಾಕ್ಷಿ ಸುದ್ದಿ, ಗದಗ**

ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮವು ರವಿವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ನಗರದ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನ ಹಾಗೂ ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಜರುಗಿತು. ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶಿವಾನಂದಯ್ಯ ಶಾಸ್ತ್ರೀ ಅವರಿಂದ ಸುಗಮ ಸಂಗೀತ, ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಬೆಟದಯ್ಯಶಾಸ್ತ್ರೀ ಇವರಿಂದ ಸುಗಮ ಸಂಗೀತ ಕಾಯಕ್ರಮಗಳು ಜರುಗಿದವು.



ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಎಚ್ ಕೆ ಪಾಟೀಲರನ್ನು ಕರ್ನಾಟಕ ಪ್ರಜಾಪರ ವೇದಿಕೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಗದಗ ಜಿಲ್ಲಾಧ್ಯಕ್ಷ ರಫೀಕ ಧಾರವಾಡ, ಜಿಲ್ಲಾ ಮಹಿಳಾ ಅಧ್ಯಕ್ಷೆ ಫಾತಿಮಾ ಹೊನ್ನಾಪುರ, ಪ್ರಧಾನ ಕಾರ್ಯದರ್ಶಿ ಸಮೀರ್ ಹೊಸಳ್ಳಿ, ಜಿಲ್ಲಾ ಉಪಾಧ್ಯಕ್ಷ ತನ್ವೀರ್ ಮಿರ್ಜಿ, ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಸಿರಾಜ್ ಲಕ್ಕುಂಡಿ, ಕಾರ್ಮಿಕರ ಘಟಕದ ಅಧ್ಯಕ್ಷ ತೌಸಿಫ್ ಮೊರಬ್ ರಬ್ಬಾನಿ ಸಿರುಗುಪ್ಪಿ, ಇಸ್ಮಾಯಿಲ್ ನಾಯ್ಕರ್ ಉಪಸ್ಥಿತರಿದ್ದರು.

# ಖಾಸಗಿ ವೈದ್ಯರಿಗೆ ತರಬೇತಿ ಕಾರ್ಯಾಗಾರ



**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ತಾಲೂಕಿನ ಎಲ್ಲಾ ಖಾಸಗಿ ವೈದ್ಯರಿಗೆ ಕ್ಷಯರೋಗ ನಿರ್ಮೂಲನೆಯ ಕುರಿತು ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ. ರಾಜೇಶ್ ಟಿ ಎಸ್, ತಾಲೂಕಾ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಲಕ್ಷ್ಮಣ್ ಪೂಜಾರ್, ಖಖಿಖಗ ಡಾ. ವಿದ್ಯಾ, ಡಾ. ಅನ್ನದಾನಿ ಮೇಟಿ, ಡಾ. ಶಂಕರ್ ಬಾವಿಮನಿ, ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎಂ ಎಸ್ ಸಜ್ಜನರ, ಜಿಲ್ಲಾ ಪಿಪಿಎಂ ಸಂಯೋಜಕರಾದ ಪಿ ರೇಣುಕಾ, ಎಸ್‌ಟಿಎಸ್ ಪ್ರವೀಣ ರಡ್ಡಿ, ಐಸಿಟಿಸಿ ಆಪ್ತಸಮಾಲೋಚಕರು, ಮಂಜುನಾಥ ಎಸ್ ಕಳಸಾಪೂರ್, ಎಸ್‌ಟಿಎಲ್‌ಎಸ್, ಮೌನೇಶ ಹಾಗೂ ತಾಲೂಕಿನ ಎಲ್ಲಾ ಖಾಸಗಿ ವೈದ್ಯರು ಪಾಲ್ಗೊಂಡಿದ್ದರು.

# ಕರ್ತವ್ಯನಿಷ್ಠ ಅಧಿಕಾರಿಗಳು ಇಲಾಖೆಯ ಹೆಮ್ಮೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಶಿಕ್ಷಣ ಇಲಾಖೆಯಲ್ಲಿ ಕಳೆದ 35 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿರುವ ಸಾಶಿ ಇಲಾಖೆಯ ಪರಿವೀಕ್ಷಕರಾದ ವಿ ಎಂ ಮೆಣಸಿನಕಾಯಿಯವರ ನಡೆ–ನುಡಿಯ ಬಗ್ಗೆ ಪ್ರತಿಯೊಬ್ಬರೂ ಹೆಮ್ಮೆಪಡುತ್ತಾರೆ. ಇಂತಹ ಅಧಿಕಾರಿ ಇಲಾಖೆಯಲ್ಲಿ ಸಿಗುವುದು ಅಪರೂಪ ಎಂದು ಡಾ. ಬಸವರಾಜ ಧಾರವಾಡ ಹೇಳಿದರು.

ಅವರು ಗದಗ ಜಿಲ್ಲಾ ಸಮಾನ ಮನಸ್ಕ ಗೆಳೆಯರ ಬಳಗದ ವತಿಯಿಂದ, ಇತ್ತೀಚೆಗೆ ಸಾ.ಶಿ ಇಲಾಖೆಯಿಂದ ನಿವೃತ್ತಿ ಹೊಂದಿದ ಪರಿವೀಕ್ಷಕ ಮೆಣಸಿನಕಾಯಿ ಅವರಿಗೆ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಮೆಣಸಿನಕಾಯಿಯವರು ತಮಗೆ ವಹಿಸಿದ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡಿ ಮುಗಿಸುವ ಮೂಲಕ ಶಿಕ್ಷಕರ ವಲಯದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ.

ಗುಣಮಟ್ಟದ ಶಿಕ್ಷಣ ಹೆಚ್ಚಿಸುವಲ್ಲಿ ಇಂಥವರ ಪಾತ್ರ ಅತಿ ಅವಶ್ಯವಾಗಿ ಇಂದು ಬೇಕಾಗಿದೆ. ಶಿಕ್ಷಣ ಕ್ಷೇತ್ರದತ್ತ ಪ್ರತಿಯೊಬ್ಬರ ದೃಷ್ಟಿ ಇರುವುದರಿಂದ, ಇಂತಹ ಅಧಿಕಾರಿಗಳು ಹೆಚ್ಚೆಚ್ಚು ಶಿಕ್ಷಣ ಇಲಾಖೆಯಲ್ಲಿ ಮೂಡಿ ಬರಬೇಕಿದೆ ಅಂತಹ ಕಾಲ ಬರಲಿ ಎಂದು ಶುಭ ಕೋರಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮೆಣಸಿನಕಾಯಿಯವರು, ಸಮಾನ ಮನಸ್ಕ ಗೆಳೆಯರ ಬಳಗದವರು ನೀಡಿದ ಸನ್ಮಾನ–ಗೌರವ ಸಂತಸ ತಂದಿದೆ. ನನ್ನ ಮೂರು ದಶಕಗಳ ಶೈಕ್ಷಣಿಕ ಸೇವಾ ಕ್ಷೇತ್ರದಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು ಎಂದರು.

ಡಾ. ಬಸವರಾಜ್ ಧಾರವಾಡ ಕುಟುಂಬದ ಸದಸ್ಯರ ವತಿಯಿಂದ ಹಾಗೂ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಮೆಣಸಿನಕಾಯಿಯವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಮುಖ್ಯೋಪಾಧ್ಯಾಯ ಎಸ್ ಎಂ ಅಗಡಿ, ಮುಖ್ಯೋಪಾಧ್ಯಾಯರಾದ ಎಂ ಎಚ್ ಪೂಜಾರ್, ಎಸ್ ಜಿ ಕೊಲ್ಮಿ, ಶಿಕ್ಷಕಿ ಜಯಲಕ್ಷ್ಮೀ ಅಣ್ಣಿಗೇರಿ ಸೇರಿದಂತೆ ಮೆಣಸಿನಕಾಯಿ ಅವರ ಕುಟುಂಬದ ಸದಸ್ಯರು, ಹಿತೈಷಿಗಳು ಭಾಗವಹಿಸಿದ್ದರು.

# 'ಮಾನವನ ಬದುಕಿನಲ್ಲಿ ಮಾಧ್ಯಮಗಳ ಪ್ರಭಾವ'



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀಮತಿ ಮನೋರಮಾಬಾಯಿ ಮೋಹನ್ ಕುಡತರಕರ್ ಫೌಂಡೇಶನ್‌ನ ಮನೋರಮಾ ಕಾಲೇಜಿನಲ್ಲಿ 'ಮಾನವನ ಬದುಕಿನಲ್ಲಿ ಮಾಧ್ಯಮ ಜಾಲಗಳ ಪ್ರಭಾವ' ಕುರಿತು ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್ ಎಮ್ ಕುಡತರಕರ ವಹಿಸಿದ್ದರು. ಪ್ರಾಚಾರ್ಯ ಬಿ ಎಸ್ ಹಿರೇಮಠ ಮಾತನಾಡಿ, ಮಾನವನ ಬದುಕಿನಲ್ಲಿ ಮಾಧ್ಯಮ ಜಾಲಗಳ ಪ್ರಭಾವ ಹಾಸು ಹೊಕ್ಕಾಗಿದೆ.

ಪರ–ವಿರೋಧ ಮಾತನಾಡುವ ವಿದ್ಯಾರ್ಥಿಗಳು ಸ್ವಾರಸ್ಯಕರವಾಗಿ ಮಾತನಾಡಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ. ಸೋಲು–ಗೆಲುವು ಮುಖ್ಯವಲ್ಲ ಭಾಗವಹಿಸುವಿಕೆ ಮುಖ್ಯ. ಜ್ಞಾನ ವಿಕಾಸಕ್ಕೆ ಇಂತಹ ಸ್ಪರ್ಧೆಗಳು ಅವಶ್ಯಕವಾಗಿವೆ ಎಂದರು.

ನಿರ್ಣಾಯಕರಾಗಿ ಪ್ರೊ. ಸಂಗಮೇಶ ಹಾದಿಮನಿ. ಪ್ರೊ. ಸುನೀತಾ ಪಾಟೀಲ ವಿದ್ಯಾರ್ಥಿಗಳ ವಿಚಾರಗಳನ್ನು ಆಲಿಸಿ, ಪ್ರಥಮ–ಸಯ್ಯದಾ ತಂಜಿಮ್, ದ್ವಿತೀಯ–ಆಲಿಯಾ ಹಾಗೂ ಸೀಮಾ, ತೃತಿಯ ಪ್ರಜ್ವಲ ಹಾಗೂ ಮನೋಜ ಇವರನ್ನು ವಿಜೇತರನ್ನಾಗಿ ಘೋಷಿಸಿದರು. ಸ್ಪರ್ಧೆ ಆಯೋಜಿಸಿದ್ದ ಪ್ರೊ. ಚೈತ್ರಾ ದಲಬಂಜನ ವಿದ್ಯಾರ್ಥಿಗಳಲ್ಲಿರುವ ಸೃಜನಾತ್ಮಕತೆಯನ್ನು ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ ಹಾಗೂ ಸಹ ಸಂಯೋಜಕರಾದ ಪ್ರೊ. ನಿವೇದಿತಾ ಪೊಲೀಸ ಪಾಟೀಲ, ಪ್ರೊ ಸವಿತಾ ಪೂಜಾರ, ಪಿಯುಸಿ ಸಹ ಸಂಯೋಜಕ ಪ್ರೊ. ರಾಘವೇಂದ್ರ ನವಲಗುಂದ, ಪ್ರೊ. ರೇಣುಕಾ ಪಾಟೀಲ, ಹರೀಶ ಬಾರಕೇರ, ಆಫೀಸ್ ಸುಪರಿಡೆಂಡೆಂಟ್ ಉಮಾ ದಿನ್ನಿ, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಾಂಸ್ಕೃತಿಕ ಲೋಕದ ರಾಯಭಾರಿ ಡಾ. ಸಂಗಮನಾಥ ಲೋಕಾಪುರ್



**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಎಲೆಮರೆಯ ಕಾಯಿಯಾಗಿ ಇದ್ದುಕೊಂಡು ಜನಮನ್ನಣೆ ಗಳಿಸಿದ ಡಾ. ಸಂಗಮನಾಥ ಲೋಕಾಪುರ್ ಅವರು ನಮ್ಮ ನಾಡಿನ ಸಾಂಸ್ಕೃತಿಕ ಲೋಕಕ್ಕೆ ನೀಡಿದ ಕೊಡುಗೆ ಅಪಾರ ಎಂದು ಶಿಕ್ಷಣ ತಜ್ಞ ಡಾ. ಬಸವರಾಜ ಧಾರವಾಡ ಅಭಿಪ್ರಾಯಪಟ್ಟರು.

ಅವರು ಸೃಜನಶೀಲ ಬರಹಗಾರ, ವಾಗ್ಮಿ, ಸಮಾಜಮುಖಿ ಚಿಂತಕರೂ ಆದ ನಿವೃತ್ತ ಪ್ರಾಧ್ಯಾಪಕ ಡಾ. ಸಂಗಮನಾಥ್ ಲೋಕಾಪುರ ಅವರನ್ನು ನಿವೃತ್ತಿ ಹೊಂದಿದ ನಿಮಿತ್ತ ಸನ್ಮಾನಿಸಿ ಮಾತನಾಡಿದರು.

ತಮ್ಮ ಹಾಸ್ಯ ಭರಿತ ಮಾತುಗಳಿಂದಲೇ ವ್ಯವಸ್ಥೆಯ ಲೋಪಗಳನ್ನು ತಿದ್ದುವ ಮೂಲಕ ಸದಾ ಸಮಾಜಮುಖಿ ಚಿಂತನೆಯಲ್ಲಿ ತೊಡಗಿದವರು. ಇವರು ಬರೆದ ಪುಸ್ತಕಗಳು ಹಲವಾರು ವಿಶ್ವವಿದ್ಯಾಲಯಗಳಿಗೆ ಬೋಧನಾ ವಿಷಯವಾಗಿವೆ. ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರ ನಾಲ್ಕು ದಶಕಗಳ ಹೋರಾಟದ ಹಾದಿಯ ಕುರಿತು 'ಮೈಲುಗಲ್ಲುಗಳು ಮಾತನಾಡುತ್ತಿವೆ' ಎಂಬ ಅಪರೂಪದ ಪುಸ್ತಕ ರಚನೆಯಾಗಿದ್ದು, ಮುದ್ರಣದ ಹಂತಕ್ಕೆ ಬಂದಿದೆ. ಪ್ರಶಸ್ತಿ–ಪುರಸ್ಕಾರಗಳಿಗೆ ದೂರವಿದ್ದು ತಮ್ಮ ಸೇವೆಯಲ್ಲಿ ತೃಪ್ತಿ ಕಂಡವರು. ಇವರು ನಮ್ಮ ನಾಡಿನ ಸಾಂಸ್ಕೃತಿಕ ಲೋಕದ ರಾಯಭಾರಿ. ಇನ್ನಷ್ಟು ಬರವಣಿಗೆಯ ಮೂಲಕ ವಿನೂತನ, ಸಮಾಜಮುಖಿ ಚಿಂತನೆಯ ಪುಸ್ತಕಗಳು ಹೊರಬರಲಿ ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಲೋಕಾಪುರ, ನನ್ನ ಹಿತೈಷಿಗಳು ನನ್ನನ್ನು ಗೌರವಿಸುವ ಮೂಲಕ ನನ್ನ ಬರವಣಿಗೆಗೆ, ನನ್ನ ವಿಚಾರಗಳಿಗೆ ಬೆನ್ನು ತಟ್ಟುತ್ತಿರುವುದರಿಂದ ಮತ್ತಷ್ಟು ಸಮಾಜಪರ ಕೆಲಸ ಮಾಡುವ ಹುಚ್ಚು ಹೆಚ್ಚಾಗಿದೆ. ಇಂದು ಗದುಗಿನ ನನ್ನ ಸ್ನೇಹಿತ ಬಳಗ ಸನ್ಮಾನಿಸಿ ಗೌರವಿಸಿದ್ದು ಎಂದೂ ಮರೆಯದ ದಿನ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಸ್ ಎಂ ಅಗಡಿ, ಎಂ ಎಚ್ ಪೂಜಾರ್, ಎಸ್ ಜಿ ಕೊಲ್ಮಿ ಮುಂತಾದವರು ಉಪಸ್ಥಿತರಿದ್ದರು.

# ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ತಾಲೂಕಿನಲ್ಲಿರುವ ಎಲ್ಲ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಈಗಾಗಲೇ ನೋಂದಣಿ ಮಾಡಿಸಿಕೊಂಡ ಸಂಸ್ಥೆಗಳನ್ನು ಹೊರತುಪಡಿಸಿ ಉಳಿದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ಹಾಗೂ ಉದ್ದಿಮೆದಾರರು ತಮ್ಮ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ನು ಕಾರ್ಮಿಕ ನಿರೀಕ್ಷಕರ ಕಚೇರಿ, ಗದಗ 1ನೇ ವೃತ್ತ ಹಾಗೂ ಕಾರ್ಮಿಕ ನಿರೀಕ್ಷಕರ ಕಚೇರಿ, ಗದಗ 2ನೇ ವೃತ್ತ , ಗದಗ ಇಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. ಸಂಸ್ಥೆಗಳು 15 ದಿನಗಳ ಒಳಗಾಗಿ ರಾಜ್ಯ ಸರ್ಕಾರದ ಇ–ಕಾರ್ಮಿಕ ತಂತ್ರಾಂಶದಲ್ಲಿ https://www.ek-armika.karnataka.gov.in/ekarmika/Static/Home.aspx ಆನ್‌ಲೈನ್ ಮೂಲಕ ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ನೋಂದಣಿ ಪತ್ರ ಪಡೆದುಕೊಳ್ಳಬಹುದಾಗಿದೆ ಎಂದು ಗದಗ 2ನೇ ವೃತ್ತದ ಕಾರ್ಮಿಕ ನಿರೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

# ಉದ್ಯಾನವನದಲ್ಲಿ ಸಂಧ್ಯಾರಾಗ




**■ವಿಜಯಸಾಕ್ಷಿ ಸುದ್ದಿ, ಗದಗ**

ಉದ್ಯಾನವನದಲ್ಲಿ ಸಂಧ್ಯಾರಾಗ ಕಾರ್ಯಕ್ರಮವು ರವಿವಾರ ಸಾಯಂಕಾಲ 6.30 ರಿಂದ 7.30 ರವರೆಗೆ ನಗರದ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಪ್ರಣವ್ ನಾಗರಾಜ ಅವರಿಂದ ಜನಪದ ಸಂಗೀತ ಕಾರ್ಯಕ್ರಮ ಜರುಗಿತು.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
**E-mail: vijayasakshidaily@gmail.com**
**ಮೊ : 9019256545**

# ಮಾನವ ಕಳ್ಳ ಸಾಗಾಣಿಕೆಗೆ ಕಠಿಣ ಶಿಕ್ಷೆ

▶▶ ಮೊದಲನೇ ಪುಟದಿಂದ

ಮಹಿಳೆ ಮತ್ತು ಮಕ್ಕಳ ಅಂಗಾಂಗಗಳ ಮಾರಾಟ ಅಥವಾ ಸಾಗಾಣಿಕೆ ಮತ್ತು ಜೀತ ಪದ್ಧತಿ, ವೇಶ್ಯಾವಾಟಿಕೆ, ಲೈಂಗಿಕ ದೌರ್ಜನ್ಯತೆ ಹೀಗೆ ವಿವಿಧ ರೀತಿಯಲ್ಲಿದೆ.

ಯಾವುದೇ ದಾಖಲೆ ಇಲ್ಲದೆ ದೊಡ್ಡ ದೊಡ್ಡ ಕಟ್ಟಡ ಕೆಲಸಗಳಿಗೆ ಮಹಿಳೆಯರು, ಮಕ್ಕಳು ಹಾಗೂ ಕಾರ್ಮಿಕರನ್ನು ದೇಶ ವಿದೇಶಗಳಿಂದ ಕರೆತಂದು ಅವರಿಗೆ ಸರಿಯಾಗಿ ಮಜೂರಿ ಕೊಡದೆ ಅವರಿಂದ ಕೆಲಸ ಮಾಡಿಸಿಕೊಂಡು ಅವರನ್ನು ಬೀದಿಗೆ ತರುವ ಕೆಲಸವನ್ನು ದೊಡ್ಡ ದೊಡ್ಡ ಗುತ್ತಿಗೆದಾರರು ಮಾಡುತ್ತಿದ್ದಾರೆ.

ಇಂತಹ ಪ್ರಕರಣ ಕಂಡುಬಂದಲ್ಲಿ ಮಹಿಳೆಯರಿಗೆ ಸಂಬಂಧಿಸಿದ್ದಲ್ಲಿ ಸಹಾಯವಾಣಿ ಸಂಖ್ಯೆಗೆ 181, ಮಕ್ಕಳ ಕಳ್ಳ ಸಾಗಾಣಿಕೆ ದೂರು ನೀಡಲು 1098 ಹಾಗೂ ಶೋಷಣೆಯ ವಿರುದ್ಧ ದೂರಗಳಿಗಾಗಿ ಸಹಾಯವಾಣಿ 112 ನ್ನು ಸಂಪರ್ಕಿಸಬಹುದಾಗಿದೆ.

ಎಲ್ಲಾ ತರಹದ ದೂರಗಳಿಗೆ ಪೊಲೀಸ್ ಇಲಾಖೆಯು ಸಾರ್ವಜನಿಕರ ಮನೆಯ ಬಾಗಿಲಿಗೆ ಬಂದು ದೂರುಗಳನ್ನು ಸ್ವೀಕರಿಸುವ ಕೆಲಸವನ್ನು ಮಾಡುತ್ತಿದೆ ಎಂದು ಕಾನೂನು ಹಾಗೂ ಪೊಲೀಸ್ ಇಲಾಖೆಯ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಪಿ.ವೈ. ಶೆಟ್ಟೆಪ್ಪನವರ, ಡಿಡಿಪಿಐ ಬಸವಲಿಂಗಪ್ಪ, ಜಿಲ್ಲಾ ಕಾರ್ಮಿಕ ಅಧಿಕಾರಿ ಬಿ.ಆರ್.ಜಾದವ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಐ.ಎಮ್. ಹಿರೇಮನಿಪಾಟೀಲ, ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿ ರಾಧಾ ಮಣ್ಣೂರ, ಜಿಲ್ಲಾ ಮಕ್ಕಳ ಸಂಸ್ಥೆಗಳ ಅಧ್ಯಕ್ಷ ಅನ್ನಪೂರ್ಣ ಗಾಣಿಗೇರ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ತಿರುಪತಿಗೆ ಕೆಎಂಎಫ್ ತುಪ್ಪ ಪೂರೈಸುತ್ತಿಲ್ಲ

■ ವಿಜಯಸಾಕ್ಷಿ ಸುದ್ದಿ, ಬಳ್ಳಾರಿ:

3ಆಂಧ್ರ ಪ್ರದೇಶದ ಪ್ರಸಿದ್ಧ ತಿರುಮಲ ತಿರುಪತಿ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಲಡ್ಡುಗಳನ್ನು ತಯಾರಿಸಲು 'ನಂದಿನಿ' ಬ್ರಾಂಡ್ ತುಪ್ಪವನ್ನು ಸರಬರಾಜು ಮಾಡುತ್ತಿಲ್ಲ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಅವರು ಸೋಮವಾರ ಹೇಳಿದ್ದಾರೆ. ಒಂದು ವರ್ಷದಿಂದಲೇ ತಿರುಪತಿಗೆ ಕೆಎಂಎಫ್ ತುಪ್ಪ ಪೂರೈಸುತ್ತಿಲ್ಲ. ನಾವು ಬೆಲೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ನಂದಿನಿ ಬ್ರಾಂಡ್ ಉತ್ಪನ್ನಗಳು ಅದರ ಗುಣಮಟ್ಟಕ್ಕೆ ಹೆಸರುವಾಸಿಯಾಗಿವೆ ಎಂದಿದ್ದಾರೆ.

ತಿರುಪತಿ ದೇವಸ್ಥಾನದಲ್ಲಿ ಲಡ್ಡು ತಯಾರಿಕೆಗೆ ಅಗತ್ಯವಿರುವ ತುಪ್ಪಕ್ಕೆ ಟೆಂಡರ್ ಕರೆಯಲಾಗಿತ್ತು. ನಮ್ಮ ದರ ಹಾಗೂ ಗುಣಮಟ್ಟ ಹೆಚ್ಚಿರುವುದರಿಂದ ನಾವು ಆ ಟೆಂಡರ್ ನಲ್ಲಿ ಪಾಲ್ಗೊಳ್ಳಲಿಲ್ಲ. ಹಾಗಾಗಿ ಅವರು ಬೇರೆ ಕಂಪನಿಯ ತುಪ್ಪವನ್ನು ಖರೀದಿಸುತ್ತಿದ್ದಾರೆ ಎಂದು ಭೀಮಾ ನಾಯ್ಕ್ ಅವರು ತಿಳಿಸಿದ್ದಾರೆ. "ಸುಮಾರು ಒಂದು ವರ್ಷದ ಹಿಂದೆಯೇ ಅವರು(ಟಿಟಿಡಿ) ಟೆಂಡರ್ ಕರೆದು ಟೆಂಡರ್‌ನಲ್ಲಿ ಭಾಗವಹಿಸುವಂತೆ ಕೇಳಿಕೊಂಡಿದ್ದರು. ಆದರೆ ನಾವು ಸ್ಪರ್ಧಾತ್ಮಕ ದರದಲ್ಲಿ ತುಪ್ಪ ನೀಡಲು ಸಾಧ್ಯವಿಲ್ಲ. ಏಕೆಂದರೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಯಾರು ಕಡಿಮೆ ದರವನ್ನು ನಮೂದಿಸುತ್ತಾರೋ ಅವರಿಗೆ ಟೆಂಡರ್ ಸಿಗುತ್ತದೆ. ಆದರೆ ನಮ್ಮ ದರ ಫಿಕ್ಸ್ ಆಗಿದೆ. ಅದರಲ್ಲಿ ರಾಜಿ ಮಾಡಿಕೊಳ್ಳಲ್ಲ ಎಂದು ಭೀಮಾ ನಾಯ್ಕ್ ಹೇಳಿದ್ದಾರೆ.

### ವಡಗೇರಾ ತಾಲೂಕಿನ ಬೀರನಾಳ, ಬಬಲಾದ ಗ್ರಾಮದಲ್ಲಿ ನಿರ್ಮಾಣವಾದ ಅಂಗನವಾಡಿ ಕಟ್ಟಡಗಳ ಉದ್ಘಾಟಿಸಿದ ಸಚಿವ ದರ್ಶನಾಪೂರ

# ಅಂಗನವಾಡಿಯೇ ಮಕ್ಕಳಿಗೆ ಮೊದಲ ಪಾಠಶಾಲೆ

■ ವಿಜಯಸಾಕ್ಷಿ ಸುದ್ದಿ, ಯಾದಗಿರಿ

ಅಂಗನವಾಡಿ ಶಾಲೆಯು ಮಕ್ಕಳ ಪ್ರಾಥಮಿಕ ಶಿಕ್ಷಣ ಕಲಿಕೆಯ ಬುನಾದಿಗೆ ಪೂರಕವಾಗಿದ್ದು, ಅಧಿಕಾರಿಗಳು ಮೂಲ ಸೌಕರ್ಯ ಒದಗಿಸಲು ಒತ್ತು ನೀಡಬೇಕು ಎಂದು ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ಯಮ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪೂರ ಅವರು ಸೂಚಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹತ್ವಾಕಾಂಕ್ಷಿ ಜಿಲ್ಲೆ ಯೋಜನೆಯಡಿ ವಡಿಗೇರಾ ತಾಲೂಕಿನ ಬೀರನಾಳ ಗ್ರಾಮದ ವಾರ್ಡ್ 01, ಬಬಲಾದ ಗ್ರಾಮದ ವಾರ್ಡ್ 02 ರಲ್ಲಿ ನಿರ್ಮಾಣವಾದ ಅಂಗನವಾಡಿ



ಕಟ್ಟಡಗಳನ್ನು ಉದ್ಘಾಟಿಸಿ ಹಾಗೂ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿ ಮಾಡಿಕೊಂಡ ಅರ್ಹ ಫಲಾನುಭವಿಗಳಿಗೆ ನೋಂದಣಿ ಪತ್ರ ವಿತರಿಸಿ ಅವರು ಮಾತನಾಡಿದರು.

ಹೊಸ ಮಾದರಿಯ ಅಂಗನವಾಡಿ ನೂತನ ಕಟ್ಟಡವು ವಿಶೇಷವಾಗಿದ್ದು, ಕಟ್ಟಡದ ಒಳಗೆ ಆಹ್ಲಾದಕರ ವಾತಾವರಣದಿಂದ ಕೂಡಿದ್ದು, ಮಕ್ಕಳು ಕಲಿಯಲು ಪೂರಕವಾದ ವಾತಾವರಣ ಕಲ್ಪಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲೆಯ ಕೊಠಡಿ ನಿರ್ಮಾಣವೂ ಗುಣಮಟ್ಟದಿಂದ ಕೂಡಿದೆ, ಸಂಬಂಧಿಸಿದ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಸರಿಯಾದ ರೀತಿಯಲ್ಲಿ ನಿರ್ವಹಿಸಿ, ಮುಂದಿನ ಮಕ್ಕಳಿಗೆ ಅನುಕೂಲವಾಗುವಂತೆ ಕಾಪಾಡಿಕೊಳ್ಳಬೇಕು. ಮಕ್ಕಳು ಸಮಾಜದಲ್ಲಿ ಉತ್ತಮ ನಾಗರಿಕನಾಗಲು ಮಾನವೀಯ ಮೌಲ್ಯಗಳನ್ನು ಬಾಲ್ಯದಲ್ಲೇ ಕಲಿಯುತ್ತಾರೆ ಎಂದು ಸಲಹೆ ನೀಡಿದರು. ನಮ್ಮ ಸರ್ಕಾರವು ಜನರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಚುನಾವಣೆ ಪೂರ್ವದಲ್ಲಿ ಗ್ಯಾರಂಟಿಗಳ ಆಶ್ವಾಸನೆ ಕೊಟ್ಟಿತ್ತು. ಅವುಗಳನ್ನು ಈಡೇಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇವೆ ಎಂದರು.

ನಮ್ಮ ಜಿಲ್ಲೆಯಲ್ಲಿ ಸುಮಾರು 2 ಲಕ್ಷದ 48 ಸಾವಿರ ಕುಟುಂಬಗಳಿದ್ದು ಅದರಲ್ಲಿ 1 ಲಕ್ಷದ 40 ಸಾವಿರ ಅರ್ಜಿಗಳು ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿದ್ದು ಇವರಿಗೆ ತಿಂಗಳಿಗೆ 2 ಸಾವಿರ ರೂಪಾಯಿಗಳನ್ನು ಹಾಕಲಾಗುತ್ತದೆ. ಇನ್ನೂ ಪೂರ್ಣ ಪ್ರಮಾಣದಲ್ಲಿ ಅರ್ಜಿ ಸಲ್ಲಿಕೆಯಾಗಬೇಕು ಆದ್ದರಿಂದ ಎಲ್ಲರೂ ನೋಂದಣಿ ಮಾಡಿಕೊಳ್ಳಿ ಎಂದು ಸಚಿವರು ಸಾರ್ವಜನಿಕರಿಗೆ ಕೋರಿದರು. ಯಾದಗಿರಿ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಮಾತನಾಡಿ, ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮುಖಾಂತರ ಸರ್ಕಾರವು ನುಡಿದಂತೆ ನಡೆಯುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದಂತೆ ಹಿಂದಿನ ಸರ್ಕಾರ ನಿಲ್ಲಿಸಿದ ಭಾಗ್ಯಗಳನ್ನು ಗ್ಯಾರಂಟಿಗಳ ಜೊತೆಗೆ ಅನುಷ್ಠಾನಕ್ಕೆ ನಮ್ಮ ಸರ್ಕಾರ ತರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸರ್ಕಾರದ ಯೋಜನೆಗಳನ್ನು ಜನರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ನುಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಗರಿಮಾ ಪನ್ವಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪ್ರೇಮಮೂರ್ತಿ ಕೆ, ಶಹಾಪುರ ಶಿಶು ಅಭಿವೃದ್ಧಿ ಅಧಿಕಾರಿ ಮೀನಾಕ್ಷಮ್ಮ ಪಾಟೀಲ, ಜಿಲ್ಲಾ ನಿರ್ಮಿತಿ ಕೇಂದ್ರದ ಅಧಿಕಾರಿ ಕಿರಣಕುಮಾರ ಹೂಗಾರ, ಗುರಸಲಂ ಗ್ರಾಮ ಪಂಚಾಯತಿ ಅಧ್ಯಕ್ಷ ಗಂಗಾಧರ್, ಸದಸ್ಯರಾದ ಮಾಳಪ್ಪ ಪೂಜಾರಿ, ಪರ್ವತರೆಡ್ಡಿ, ಮುಖಂಡರಾದ ಜಲಾಲ್ ಪಟೇಲ್, ಇಸ್ಮಾಯಿಲ್ ಪಟೇಲ್, ಜಕ್ಕಪ್ಪ ಪೂಜಾರಿ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

### ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಆಲ್ಕೋಡ ಹನುಮಂತಪ್ಪ ಟೀಕೆ

# ಗ್ಯಾರಂಟಿ ಯೋಜನೆ ಅಲ್ಪಾಯುಷಿ ಶಿಶು

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಹೊಡೆತಕ್ಕೆ ಅಭಿವೃದ್ಧಿ ಕಾರ್ಯ ಕುಂಠಿತಗೊಳ್ಳಲಿದೆ. ಗ್ಯಾರಂಟಿ ಯೋಜನೆ ಅಲ್ಪಾಯುಷಿ ಶಿಶು ಎಂದು ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ, ಮಾಜಿ ಸಚಿವ ಆಲ್ಕೋಡ ಹನುಮಂತಪ್ಪ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ಮಾಡಿದರು.

ರವಿವಾರ ಗದಗ ಜಿಲ್ಲಾ ಜೆಡಿಎಸ್ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್



ಅಧಿಕಾರಕ್ಕೆ ಬಂದಿದ್ದು ಗ್ಯಾರಂಟಿ ಯೋಜನೆಗಳ ಮುಖಾಂತರ ಅಲ್ಲ. ಬದಲಾಗಿ, ಬಿಜೆಪಿ ಸರ್ಕಾರದ ಬಗ್ಗೆ ಜನತೆ ರೋಸಿ ಹೋಗಿದ್ದೇ ಕಾರಣ. ಎಚ್‌ಡಿಕೆ ಅವರ ಪಂಚರತ್ನ ಯೋಜನೆಯ ಬಗ್ಗೆ ಜನ ನಂಬಲಿಲ್ಲ. ಈಗ ಅದೇ ಜನ ಕುಮಾರಸ್ವಾಮಿಯವರೇ ಮುಖ್ಯಮಂತ್ರಿ ಆಗಬೇಕಿತ್ತು ಎಂದು ಮಾತನಾಡಿಕೊಳ್ಳುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಶ್ರೀಶೈಲ್ ಗಡದಿನ್ನಿ, ಅಂದಾನಯ್ಯ ಕುರ್ತುಕೋಟಿಮಠ, ಎಂ ಆರ್ ಸೋಂಪೂರ, ಪಿ ಸಿ ಹಿರೇಮನಿ, ಶಂಕರ ಬಾಳಿಕಾಯಿ, ಸಿ ಎಸ್ ಪಾಟೀಲ, ಹೆಚ್ ಎನ್ ಹಳಕಟ್ಟಿ, ಶ್ರೀಪಾದ ಆನೆಗುಂದಿ, ಡಾ. ಎಸ್ ಆರ್ ಹಿರೇಮಠ, ಹಾಜಿಅಲಿ ಕೊಪ್ಪಳ, ಮಂಜುಳಾ ಮೇಟಿ, ಪ್ರವೀಣ ಬಾಳಿಕಾಯಿ, ಬಸವರಾಜ ಅಪ್ಪಣ್ಣವರ, ಎಂ ವೈ ಮುಧೋಳ, ವಿಜಯಪ್ಪ ಸಳುಂಕೆ, ಜೆ ಕೆ ಕೊಳ್ಳಿಮಠ, ಅಶೋಕ ತ್ಯಾಮನವರ, ಸುಭಾಷ ದಾನರೆಡ್ಡಿ, ವಸಂತ ಇಂಜಿನಿ, ಶಿರಾಜ ಕದಡಿ, ತಿಪ್ಪಣ್ಣ ಹುಡೇದ, ಎಲ್ಲಪ್ಪ ಜಿಡ್ಡಿ, ಮಾಂತೇಶ ಕಣವಿ, ಪ್ರಭುರಾಜಗೌಡ ಪಾಟೀಲ, ಅಬ್ದುಲ ನರಸಾಪೂರ, ಲಕ್ಷ್ಮಣ ನಾಯಕ, ವೀರಭದ್ರಪ್ಪ ಅಕ್ಕಿ, ವಿನಾಯಕ್ ಪರಭತ, ಪ್ರಕಾಶ ದೊಡ್ಡಮನಿ, ಎಲ್ಲಪ್ಪ ಹೂಗಾರ, ಸಂಗಪ್ಪ ಎಲ್ಲುಣಚಿ, ರಫೀಕ ಹವಾಲ್ದಾರ, ದೇವೇಂದ್ರ ಸೂಲಿ, ಜಿ ಎ ಬುರುಡಿ, ಮಂಜುನಾಥ ದೊಡ್ಮನಿ, ಶಶಿ ಸಾಳುಂಕೆ, ದೇವೇಂದ್ರಪ್ಪ ಮಲಸಮುದ್ರ, ಪ್ರಫುಲ ಪುಣೆಕರ, ಕುರುಡಗಿ, ಸೋಯಿಲ ನಾಗನೂರ, ಲಕ್ಷ್ಮಣ ತಳವಾರ, ಬಸವರಾಜ ಜರ್ಲಿ ಉಪಸ್ಥಿತರಿದ್ದರು.

# ಯೂರಿಯಾ ರಸಗೊಬ್ಬರಕ್ಕೆ ಬದಲಾಗಿ ನ್ಯಾನೋ ಯೂರಿಯಾ ಬಳಸಿ

▶▶ ಮೊದಲನೇ ಪುಟದಿಂದ

ಯೂರಿಯಾ ಬಳಕೆಯಿಂದ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸಿ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುತ್ತದೆ.

ಹರಳು ರೂಪದ ಯೂರಿಯಾ ತಯಾರಿಕೆಯಲ್ಲಿ ಈುಟಟಜಡಿ ಪದಾರ್ಥಗಳ ಬಳಕೆಯಿಂದ ಮಣ್ಣಿನ ಪೋಷಕಾಂಶಗಳಿಗೆ ಹಾನಿಯಾಗಿ, ಜಲ ಮೂಲಗಳಿಗೆ ಓಣಡಿಚಿಣಜ ಮಾಲಿನ್ಯ ಹರಡುತ್ತದೆ. ಹಾಗೂ Blue Baby Syndrome ನವಜಾತ ಶಿಶುಗಳಲ್ಲಿ ಕಂಡು ಬರುವ ಸಾಧ್ಯತೆಗಳಿರುತ್ತದೆ.

ನ್ಯಾನೋ ಯೂರಿಯಾ ಬಳಕೆಯಿಂದ ಸಾಮಾನ್ಯವಾಗಿ ಹರಳು ರೂಪದ ಯೂರಿಯಾ ಬಳಕೆಯನ್ನು ಶೇ. 50 ರಷ್ಟು ಕಡಿಮೆ ಮಾಡಬಹುದು. ರೈತರು ಇದನ್ನು ಸುಲಭವಾಗಿ ಶೇಖರಿಸಿ ಸಾಗಾಣಿಕೆ ಮಾಡಬಹುದು. ಇದು ಮಣ್ಣು, ಗಾಳಿ, ನೀರಿನ ಗುಣಮಟ್ಟ ಹಾಗೂ ಒಟ್ಟಾರೆ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಿರುತ್ತದೆ.

ಏಕದಳ, ದ್ವಿದಳ ಧಾನ್ಯಗಳು ಹಾಗೂ ಎಣ್ಣೆಕಾಳುಗಳಲ್ಲಿ ಮೊದಲನೇ ಸಿಂಪಡಣೆಯನ್ನು ಮೊಳಕೆ ಹೊಡೆದ 30-35 ದಿನಗಳ ನಂತರ ಹಾಗೂ ಎರಡನೇ ಸಿಂಪಡಣೆಯನ್ನು 50-60 ದಿನಗಳ ನಂತರ ಮಾಡಬಹುದು.

ಒಂದು ಬಾಟಲ್ ನ್ಯಾನೋ ಯೂರಿಯಾ (500 ಮೀ.ಲೀ) ವು ಒಂದು ಚೀಲ ಹರಳು ರೂಪದ ಯೂರಿಯಾಗೆ ಸಮವಾಗಿರುತ್ತದೆ. ಒಂದು ಬಾಟಲ್ ನ್ಯಾನೋ ಯೂರಿಯಾದ ದರವು ರೂ. 225 ಇದ್ದು, ಸಬ್ಸಿಡಿ ರಹಿತವಾಗಿರುತ್ತದೆ. ಹರಳು ರೂಪದ ನ್ಯಾನೋ ಯೂರಿಯಾದ ದರ ಸಬ್ಸಿಡಿ ಒಳಗೊಂಡಂತೆ ರೂ. 266 ಇದೆ.

ಕೇಂದ್ರ ಸರ್ಕಾರದ ಆಮದು ಮೂಲಕ ದೇಶಕ್ಕೆ ಸಬ್ಸಿಡಿ ರೂಪದಲ್ಲಿ ಆಮದು ಹೆಚ್ಚಿನ ಹೊರೆಯಾಗುತ್ತಿದೆ ಹಾಗೂ ಹರಳು ರೂಪದ ಯೂರಿಯಾಗೆ ಪರ್ಯಾಯವಾಗಿ ನ್ಯಾನೋ ಯೂರಿಯಾದ ಬಳಕೆಯು ಸಬ್ಸಿಡಿ ಹೊರೆಯನ್ನು ತಗ್ಗಿಸುವುದರ ಜೊತೆಗೆ ವಿದೇಶಿ ವಿನಿಮಯದ ಉಳಿಕೆಗೆ ಸಹ ಉತ್ತೇಜನ ನೀಡುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ಇಫ್ಕೋ ಸಂಸ್ಥೆಯ ಪ್ರತಿನಿಧಿ ಗಣೇಶ ಮೊಬೈಲ್ ಸಂಖ್ಯೆ: 9448090423 ಇವರನ್ನು ಸಂಪರ್ಕಿಸಬಹುದಾಗಿದೆ .

### ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವ ಎಚ್ ಕೆ ಪಾಟೀಲ ಕರೆ

# ಪತ್ರಕರ್ತರು ಮೌಲ್ಯಾಧಾರಿತ ಸುದ್ದಿಗೆ ಒತ್ತು ನೀಡಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪತ್ರಕರ್ತರು ಪ್ರಾಮಾಣಿಕ ಸೇವೆ ಸಲ್ಲಿಸಿದರೆ ಮಾತ್ರ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಸಾಧ್ಯ. ಸಾಮಾಜ ತಿದ್ದವ, ರಾಜಕಾರಣಿಗಳನ್ನು ಎಚ್ಚರಿಸುವ ಪತ್ರಕರ್ತರು ಮೌಲ್ಯಾಧಾರಿತ ಸುದ್ದಿಗೆ ಹೆಚ್ಚು ಒತ್ತು ನೀಡಬೇಕು ಎಂದು ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ್ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದ ಸಭಾಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾ ಘಟಕದ ಆಶ್ರಯದಲ್ಲಿ ಮುಳಗುಂದ ಘಟಕದಿಂದ



ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ಪತ್ರಿಕಾ ರಂಗವು ಅತ್ಯಂತ ಬಲಶಾಲಿಯಾಗಿದ್ದು ಪ್ರರ್ತಕರ್ತರು ಗ್ರಾಮೀಣ ಭಾಗದ ಸಮಸ್ಯೆಗಳನ್ನು ಬೆಳಕಿಗೆ ತರುವ ಮೂಲಕ ಆ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಎಸ್ ವಿ ಸಂಕನೂರ ಮಾತನಾಡಿ, ಗ್ರಾಮೀಣ ಭಾಗದ ಪತ್ರಕರ್ತರು ಸಾಕಷ್ಟು ಸಮಸ್ಯೆಗಳ ನಡುವೆಯೂ, ತಮ್ಮ ಜೀವದ ಹಂಗು ತೊ-ರೆದು ಕೋವಿಡ್ ಖಾಯಿಲೆಯ ಸಂದರ್ಭದಲ್ಲಿಯೂ ಪ್ರತಿ ನಿತ್ಯ ಸುದ್ದಿಗಳನ್ನು ಕೊಡುತ್ತಿದ್ದರು. ಇದರಿಂದ ಸರಕಾರ ಎಚ್ಚೆತ್ತು, ಕಾಲ ಕಾಲಕ್ಕೆ ಔಷಧಿ, ಮೂಲಭೂತ ಸೌಕರ್ಯ ನೀಡಿ ರೋಗಿಗಳನ್ನು ಕಾಪಾಡಿದ್ದನ್ನು ಮರೆಯಲು ಸಾಧ್ಯವಿಲ್ಲ. ಈ ದಿನ ಸಾಧಕ ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಗೌರವಿಸುತ್ತಿರುವ ಕಾರ್ಯ ಶ್ಲಾಘನಿಯ ಎಂದರು.

ದಿವ್ಯ ಸಾನ್ನಿಧ್ಯವನ್ನು ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಮಾಹಾಸ್ವಾಮಿಜಿ ವಹಿಸಿದ್ದರು. ಮುಳಗುಂದ ಘಟಕದ ಅಧ್ಯಕ್ಷ ಎಂ ಎಂ ಜಮಾಲಸಾಬನರ, ರಾಜು ಹೆಬ್ಬಳ್ಳಿ, ವಿರುಪಾಕ್ಷ ಕಣವಿ, ಎಸ್ ಎಂ ನೀಲಗುಂದ, ಎಂ ಡಿ ಬಟ್ಟೂರ, ಡಾ. ಎಸ್ ಸಿ ಚವಡಿ, ಬಸವರಾಜ ಬಡ್ನಿ, ಅನಿಲ್ ವೈದ್ಯ, ಡಾ.ಬಸವರಾಜ ಬೊಮ್ಮನಹಳ್ಳಿ, ವಸಂತ ಮಡ್ಲೂರ, ಸೈಯದಲಿ ಶೇಖ, ಬಿ ವಿ ಸುಂಕಾಪೂರ, ಮಾಹಾಂತೇಶ ನೀಲಗುಂದ, ಕೆ ಎಲ್ ಕರಿಗೌಡರ, ಬುದ್ದಪ್ಪಾ ಮಾಡಳ್ಳಿ, ಎನ್ ಆರ್ ದೇಶಪಾಂಡೆ, ಮಾಹಾದೇವಪ್ಪಾ ಗಡಾದ, ಮಲ್ಲಪ್ಪ ಕುಂದಗೋಳ, ರಾಮಣ್ಣಾ ಕಮಾಜಿ ಮುಂತಾದವರಿದ್ದರು.

ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಅಂದಾನಮ್ಮಾ ಬಳ್ಳಾರಿ, ನಮಿತಾ ಗುರಮ್ಮನವರ, ಗಂಗಮ್ಮಾ ಅವ್ವಣ್ಣವರ, ಶಿಕ್ಷಕರಾದ ಪಿ ಬಿ ಕೆಂಚನಗೌಡರ, ಎಸ್ ಎಂ ನವಲೆ, ಎಚ್ ಟಿ ಕಟ್ಟಿಮನಿ, ಶ್ರೀದೇವಿ ಕೊಡಿಹಳ್ಳಿ, ಬಸವರಾಜ ಕೋಳಿವಾಡ, ಬಸಪ್ಪ ಛಲವಾದಿ ಇವರುಗಳನ್ನು ಸಂಘದ ಪರವಾಗಿ ಸನ್ಮಾನಿಸಲಾಯಿತು.

### ಪ್ರತಿಕಾ ದಿನಾಚರಣೆ, ಸನ್ಮಾನ ಸಮಾರಂಭದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅಭಿಪ್ರಾಯ

# ಪತ್ರಿಕೆಗಳು ಸಮಾಜದ ಪ್ರತಿಬಿಂಬ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜಗತ್ತಿನ ಆಗು-ಹೋಗುಗಳ ಮಾಹಿತಿ ಮತ್ತು ಜ್ಞಾನ ನೀಡುವುದರೊಂದಿಗೆ ಸಮಾಜದ ಓರೆಕೋರೆಗಳನ್ನು ತಿದ್ದುವ ಜವಾಬ್ದಾರಿಯುತ ಪತ್ರಿಕಾ ರಂಗವನ್ನು ಎಲ್ಲರೂ ಗೌರವಿಸಿ ಈ ಕ್ಷೇತ್ರಕ್ಕೆ ಇನ್ನಷ್ಟು ಶಕ್ತಿ ತುಂಬುವ ಕೆಲವಾಗಬೇಕು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಅವರು ಭಾನುವಾರ ಪಟ್ಟಣದ ತಾಲೂಕಾ ಕಾರ್ಯನಿತರ ಪತ್ರಕರ್ತರ ಸಂಘದ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಕಾ ದಿನಾಚರಣೆ ಮತ್ತು ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಕ್ಷೇತ್ರದ ಜನತೆ ನನ್ನ ಮೇಲೆ ಅಪಾರವಾದ ನಂಬಿಕೆಯಿಟ್ಟು ಆಶೀರ್ವಾದ ಮಾಡಿದ್ದಾರೆ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವ ದಿಟ್ಟ ನಿಲುವು ನನ್ನದಾಗಿದ್ದು, ಅದಕ್ಕೆ ಮಾಧ್ಯಮ ಪ್ರತಿನಿಧಿಗಳ ಸಹಕಾರವೂ ಅಷ್ಟೇ ಮುಖ್ಯವಾಗಿದೆ. ಪತ್ರಕರ್ತರ ಶ್ರೇಯೋಭಿವೃದ್ಧಿಗಾಗಿ ತಾವೂ ಬದ್ಧರಾಗಿದ್ದೇವೆ ಎಂದರು.

ಸಾಹಿತಿ ಪೂರ್ಣಾಜೆ ಖರಾಟೆ ಮಾತನಾಡಿ, ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳು ಬದ್ಧತೆಯನ್ನು ಪ್ರದರ್ಶಿಸದೇ ಇದ್ದಾಗ ಆರೋಗ್ಯ, ಶಿಕ್ಷಣ, ರಾಜಕೀಯ ವಿವಿಧ ಕ್ಷೇತ್ರಗಳು ಮೌಲ್ಯ ಕಳೆದುಕೊಂಡು ಜಿಡ್ಡುಗಟ್ಟಿದಾಗ ಎಚ್ಚರಿಸುವ ಕಾರ್ಯವನ್ನು ಪತ್ರಿಕಾ ರಂಗ ಮಾಡುತ್ತದೆ.

ಪತ್ರಿಕಾರಂಗ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದರೂ ಅತ್ಯಂತ ಕಡಿಮೆ ಬೆಲೆಗೆ ಓದುಗರ ಮನೆ ಬಾಗಿಲಿಗೆ ಪತ್ರಿಕೆ ತಲುಪುವ ವ್ಯವಸ್ಥೆ ಮಾಡುತ್ತಿದ್ದು ಎಲ್ಲರೂ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಹಿರಿಯರಾದ ಚಂಬಣ್ಣ ಬಾಳಿಕಾಯಿ, ಪದ್ಮರಾಜ ಪಾಟೀಲ ಮಾತನಾಡಿದರು. ತಾಕಾನಿಪ ಸಂಘದ ಅಧ್ಯಕ್ಷ ಮಲ್ಲು ಕಳಸಾಪುರ ಅಧ್ಯಕ್ಷತೆ ವಹಿಸಿದ್ದರು. ವಕೀಲರಾದ ಬಸವರಾಜ ಬಾಳೇಶ್ವರಮಠ ಪತ್ರಿಕಾ ದಿನಾಚರಣೆ ಉದ್ದೇಶದ ಕುರಿತು ಪ್ರಾಸ್ತಾವಿಕ ಮಾತನಾಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ದಿಗಂಬರ ಪೂಜಾರ ನಿರೂಪಿಸಿದರು.

ತಾಲೂಕಾ ಪತ್ರಕರ್ತರ ಸಂಘದ ಸದಸ್ಯ ಮತ್ತು ಹುಬ್ಬಳ್ಳಿಯಲ್ಲಿ ಗುಡ್ಡಪ್ಪ ನೀಲಪ್ಪ ಶಿರಹಟ್ಟಿ ಸೇವಾ ಸಂಸ್ಥೆಯಡಿ ಹಸಿದರವರಿಗೆ ಅನ್ನ ಜೋಳಿಗೆ ಕಾರ್ಯಕ್ರಮದಡಿ ಬಡವರು, ನಿರ್ಗತಿಕರು, ಅನಾಥರು, ಹಸಿದವರಿಗೆ ಉಣಬಡಿಸುವ ಮತ್ತು ನಿಸ್ವಾರ್ಥ ಸಮಾಜಸೇವೆ ಮಾಡುತ್ತಿರುವ ಲಕ್ಷ್ಮೇಶ್ವರದವರೇ ಆದ ಕರಿಯಪ್ಪ ಶಿರಹಟ್ಟಿ ದಂಪತಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ವೀರಣ್ಣ ಪವಾಡದ, ಪದ್ಮರಾಜ ಪಾಟೀಲ, ಗಂಗಾಧರ ಮೆಣಸಿನಕಾಯಿ, ಯು ಪದ್ಮನಾಭ ಶೆಟ್ಟಿ, ಅಂಬರೇಶ ತೆಂಬದಮನಿ, ರಂಜನ ಪಾಟೀಲ, ರಾಜರತ್ನ ಹುಲಗೂರ ಪತ್ರಕರ್ತರಾದ ಸೋಮಪ್ಪ ಯತ್ತಿನಹಳ್ಳಿ, ಮಾಲಿಂಗರಾಯ ಪೂಜಾರ, ಸುರೇಶ ಲಮಾಣಿ, ಪರಮೇಶ ಲಮಾಣಿ, ಶಿವಲಿಂಗಯ್ಯ ಹೊತ್ತಗಿಮಠ, ಮಂಜುನಾಥ ರಾಠೋಡ ಸೇರಿದಂತೆ ತಾಲೂಕು ಪತ್ರಕರ್ತರು ಪಾಲ್ಗೊಂಡಿದ್ದರು.

> ಟಿವಿ, ಮೊಬೈಲ್, ಕಂಪ್ಯೂಟರ್ ಸೇರಿ ತಾಂತ್ರಿಕ ಮಾಧ್ಯಮದ ಪ್ರಭಾವದ ನಡುವೆಯೂ ದಿನಪತ್ರಿಕೆಗಳು ಜನರ ನಂಬಿಕೆ, ವಿಶ್ವಾಸಕ್ಕೆ ಪಾತ್ರವಾಗಿವೆ. ಸಮಾಜದಲ್ಲಿ ಧರ್ಮ, ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ದೇಶ-ಭಾಷೆಯ ಬಗೆಗಿನ ಅರಿವನ್ನು ಸದಾ ಜಾಗೃತಗೊಳಿಸುವ ಕಾರ್ಯವನ್ನು ಪತ್ರಿಕೆಗಳು ಮಾಡುತ್ತವೆ. ಪ್ರಸ್ತುತ ರಾಜಕೀಯ ಸ್ಥಿತ್ಯಂತರದಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದೆ. ರಾಜಕಾರಣಿಗಳ, ಅಧಿಕಾರಿಗಳ ಕಾರ್ಯವೈಖರಿಯನ್ನು ಎಚ್ಚರಿಸುವ ಮತ್ತು ರೈತರ, ಜನಸಾಮಾನ್ಯರ ಬದುಕು-ಬವಣೆಯ ಮೇಲೆ ಬೆಳಕು ಚೆಲ್ಲುವ, ಒಟ್ಟಿನಲ್ಲಿ ಸಮಾಜದ ಪ್ರತಿಬಿಂಬವಾಗಿ ಪತ್ರಿಕೆಗಳು ಕಾರ್ಯ ನಿರ್ವಹಿಸುತ್ತವೆ.
>
> **- ಡಾ.ಚಂದ್ರು ಲಮಾಣಿ.**
> ಶಾಸಕರು, ಶಿರಹಟ್ಟಿ.

> ಸಮಾಜದಲ್ಲಿ ಮೌಲ್ಯನಿಷ್ಠ, ಸ್ವಾಸ್ಥ್ಯ, ಶಾಂತಿ, ಸುವ್ಯವಸ್ಥೆ ಕಾಪಾಡುವ ಮತ್ತು ಪ್ರಸ್ತುತ ಸ್ಪರ್ಧಾತ್ಮಕ ಯುಗಕ್ಕೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗುವ ಪತ್ರಿಕೆಗಳ ಸಂಖ್ಯೆ ಹೆಚ್ಚಬೇಕು. ಪಾಲಕರು ಮಕ್ಕಳಲ್ಲಿ ಪತ್ರಿಕೆ ಓದುವ ಹವ್ಯಾಸ ಬೆಳೆಸಬೇಕು. ವೃತ್ತಿಗೆ ಯಾವುದೇ ಭದ್ರತೆಗಳಲಿಲ್ಲದಿದ್ದರೂ ತಮ್ಮ ವೈಯಕ್ತಿಕ ಬದುಕನ್ನು ಬದಿಗಿಟ್ಟು ಸಾಮಾಜಿಕ ಕಳಕಳಿ ಮತ್ತು ಚಿಂತನೆಗಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಜನರಿಗೆ ಮಾಹಿತಿ ನೀಡುವ, ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಾರೆ. ಸಮಾಜ ಪತ್ರಿಕಾ ಕ್ಷೇತ್ರವನ್ನು ಗೌರವದಿಂದ ಕಾಣಬೇಕು.
>
> **- ಎಸ್ ಪಿ ಬಳಿಗಾರ.**
> ಜಿ ಪಂ ಮಾಜಿ ಅಧ್ಯಕ್ಷರು.

# ಸಮಾಜದ ಅಭಿವೃದ್ಧಿಗಾಗಿ ಒಗ್ಗಟ್ಟಿನಿಂದ ಹೋರಾಡೋಣ



■ ವಿಜಯಸಾಕ್ಷಿ ಸುದ್ದಿ, ಗದಗ

ಸುಣಗಾರ, ಅಂಬಿಗೇರ, ಗಂಗಾಮತ ಸಮಾಜವನ್ನು ಎಸ್ ಟಿಗೆ ಸೇರಿಸುವಂತೆ ಬೃಹತ್ ಪ್ರತಿಭಟನೆಯನ್ನು ಆಗಸ್ಟ್ 18ರಂದು ಕೊಪ್ಪಳ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಅದರ ಅಂಗವಾಗಿ ಗದಗ ನಗರದಲ್ಲಿ ಪೂರ್ವಭಾವಿ ಸಭೆಯನ್ನು ರವಿವಾರ ಏರ್ಪಡಿಸಲಾಗಿತ್ತು. ಹೋರಾಟ ಸಮಿತಿಯ ರಾಜ್ಯ ಅಧ್ಯಕ್ಷ ಶಿವಾಜಿ ಮೆಟಗಾರ ಮಾತನಾಡಿ, ಶಿಕ್ಷಣ, ಸಂಘಟನೆ, ಹೋರಾಟದ ಮುಖಾಂತರ ಎಸ್ ಟಿ ಮೀಸಲಾತಿ ನಮ್ಮ ಹಕ್ಕು. ನಮ್ಮ ಜನಾಂಗ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದ ಸಮಾಜವಾಗಿರುವುದರಿಂದ ಎಸ್‌ಟಿಗೆ ಸೇರ್ಪಡಿಸಬೇಕು ಎಂದು ಆಗ್ರಹಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಸಂಗಮೇಶ ಹಾದಿಮನಿ, ಸಮಾಜ ಅಭಿವೃದ್ಧಿಯತ್ತ ಸಾಗಬೇಕಾದರೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಡೋಣ. ನಮ್ಮ ಹಕ್ಕನ್ನು ಪಡೆಯೋಣ. ಸಮಾಜ ಬಾಂಧವರು ಕೊಪ್ಪಳದಲ್ಲಿ ಅಗಸ್ಟ್ 18ರಂದು ಜರುಗುವ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳೋಣ ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಂಖಡರಾದ ಗುರು ತಿರ್ಲಾಪೂರ, ಸಮಾಜ ಟ್ರಸ್ಟ್ ಉಪಾಧ್ಯಕ್ಷ ಪ್ರವೀಣ ನೀಲಣ್ಣವರ, ಸುಜಾತಾ ಗುಡಿಸಾಗರ, ಗಿರಿಜಾ ಬಾರಕೇರ, ರೇಖಾ ನಾಗರಾಳ, ಶಂಕುತಲಾ ಉಮಚಗಿ, ನಾಗರಾಜ ನಾಗರಾಳ, ಹರೀಶ ಬಾರಕೇರ, ಯುವ ಘಟಕದ ಅಧ್ಯಕ್ಷ ಮಂಜುನಾಥ ಗುಡಿಸಾಗರ, ಸಹ ಕಾರ್ಯದರ್ಶಿ ರವಿಕುಮಾರ ಗುಡಿಸಾಗರ, ಸಂಘಟನಾ ಕಾರ್ಯದರ್ಶಿ ಅಮಿತ ಪೂಜಾರ, ರಾಜು ಪೂಜಾರ, ಬಸವರಾಜ ಗುಡಿಸಾಗರ, ನಂದೀಶ ಬಾರಕೇರ, ಕಿರಣ ಗೌರಿ, ಪ್ರಕಾಶ ಬಾರಕೇರ, ಮಂಜು ಅಂಬಿಗೇರ, ರಮೇಶ ಬೆಣಕಲ್ಲ, ರಾಮು ಕೌದಿ, ಚಂದ್ರಶೇಖರ್ ಬಾರಕೇರ, ಸಮಾಜ ಬಾಂಧವರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಬಿಜೆಪಿಯವರು ಯಾವಾಗಲೂ ಕೆಟ್ಟ ಇತಿಹಾಸ ಸೃಷ್ಟಿಸುತ್ತಾರೆ: ಲಕ್ಷ್ಮಣ ಸವದಿ ವಾಗ್ದಾಳಿ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

'ಪ್ರತಿಪಕ್ಷದ ನಾಯಕನಿಲ್ಲದೇ ಅಧಿವೇಶನ ನಡೆದಿರುವುದು ದುರಂತ' ಅಕಸ್ಮಾತ್ ಸಿಟಿ ರವಿ ಬಿಜೆಪಿ ಅಧ್ಯಕ್ಷರಾದರೆ ಅದು ದುರ್ದೈವದ ಸಂಗತಿ ರಾಷ್ಟ್ರೀಯ ಪಕ್ಷವಾದ ಬಿಜೆಪಿಗೆ ಈವರೆಗೂ ವಿಧಾನಸಭಾ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಪ್ರತಿಪಕ್ಷದ ನಾಯಕನಿಲ್ಲದೇ ಅಧಿವೇಶನ ನಡೆದಿರುವುದು ದುರಂತದ ಸಂಗತಿ ಎಂದು ಶಾಸಕ ಲಕ್ಷ್ಮಣ ಸವದಿ ಕುಟುಕಿದರು.

ಬೆಳಗಾವಿಯಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, "ವಿರೋಧ ಪಕ್ಷದ ನಾಯಕನಿಲ್ಲದೆ ಅಧಿವೇಶನ ನಡೆದಿರುವುದು ಇತಿಹಾಸದಲ್ಲಿ ಮೊದಲು. ಇಂತಹ ಕೆಟ್ಟ ಇತಿಹಾಸವನ್ನು ಬಿಜೆಪಿಯವರು ಸೃಷ್ಟಿಸುತ್ತಾರೆ" ಎಂದು ವಾಗ್ದಾಳಿ ನಡೆಸಿದರು. "ಹೊಸದಾಗಿ ಸರ್ಕಾರ ರಚನೆಯಾಗಿದೆ. ಎಲ್ಲ ಶಾಸಕರು ತಮ್ಮ ಬೇಡಿಕೆಗಳ ಕುರಿತು ಮುಖ್ಯಮಂತ್ರಿಗಳಿಗೆ ತಿಳಿಸುವುದು ಸಾಮಾನ್ಯ. ರಾಜ್ಯ ಕಾಂಗ್ರೆಸ್ ನಾಯಕರ ಸಭೆಯನ್ನು ರಾಹುಲ್ ಗಾಂಧಿ ಕರೆದಿದ್ದರು. ಪ್ರತಿಪಕ್ಷಗಳ ಸಭೆಯ ಹಿನ್ನೆಲೆಯಲ್ಲಿ ಶಾಸಕಾಂಗ ಪಕ್ಷದ ಸಭೆ ಮುಂದಕ್ಕೆ ಹೋಗಿತ್ತು. ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಗಸ್ಟ್ 2ರಂದು ಸಭೆ ಕರೆದಿದ್ದಾರೆ. ಆ ಸಭೆಗೆ ಹೋಗುತ್ತೇವೆ" ಎಂದು ತಿಳಿಸಿದರು.

ಲೋಕಸಭೆ ಚುನಾವಣೆಯಲ್ಲಿ ಲಕ್ಷ್ಮಣ ಸವದಿ, ಜಗದೀಶ ಶೆಟ್ಟರ್ ಅವರಿಗೆ ಹೊಸ ಟಾಸ್ಕ್ ನೀಡಲಾಗಿದೆಯಂತೆ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, "ಅದು ಟಾಸ್ಕ್ ಅಲ್ಲ. ಒಂದು ಪಕ್ಷದಲ್ಲಿದ್ದಾಗ ಕೊಡುವ ಜವಾಬ್ದಾರಿ. ಓಡಾಡಿ ಕೆಲಸ ಮಾಡಬೇಕು" ಎಂದರು.

ಸಿ ಟಿ ರವಿ ಅವರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆಯಲ್ಲಾ ಎಂಬ ಪ್ರಶ್ನೆಗೆ ಉತ್ತರಿಸಿದ ಸವದಿ, "ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ಯಾರು ಆಗುತ್ತಾರೆ ಎಂಬುದು ನಮಗೆ ಮುಖ್ಯವಲ್ಲ. ಅಕಸ್ಮಾತ್ ಸಿಟಿ ರವಿ ಅಧ್ಯಕ್ಷರಾದರೆ ಅದು ದುರ್ದೈವದ ಸಂಗತಿ. ಅಧ್ಯಕ್ಷರಾಗಿ ರವಿ ಆ ಪಕ್ಷದಲ್ಲಿ ಬೆಳೆಯುತ್ತಾನೆ ಎಂದರೆ ಶುಭಕೋರುವೆ" ಎಂದು ಹೇಳಿದರು.

### ಮುಕ್ತಿಮಂದಿರ ಅಭಿವೃದ್ಧಿಗೆ ಆಡಳಿತಾತ್ಮಕ ಗೊಂದಲ: ಮರೀಚಿಕೆಯಾದ ಮೂಲಭೂತ ಸೌಲಭ್ಯಗಳು

# ಶ್ರೀಕ್ಷೇತ್ರದ ಅಭಿವೃದ್ಧಿಗೆ ಬೇಕಿದೆ ಪ್ರಾಮಾಣಿಕ ಪ್ರಯತ್ನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭೂಕೈಲಾಸ, ತ್ರಿಕೋಟಿ ಶಿವಲಿಂಗ ಸ್ಥಾಪಿತವಾಗಲಿರುವ ಧರ್ಮಕ್ಷೇತ್ರ, ಲಿಂ.ಜ.ವೀರಗಂಗಾಧರ ಜಗದ್ಗುರುಗಳ ತಪೋಭೂಮಿ ಮತ್ತು ನಾಡಿನ ಅಪಾರ ಭಕ್ತರ ಆರಾಧ್ಯ ಕ್ಷೇತ್ರವಾದ ಮುಕ್ತಿಮಂದಿರ ಧರ್ಮಕ್ಷೇತ್ರ ಮೂಲಭೂತ ಸೌಲಭ್ಯದಿಂದ ವಂಚಿತವಾಗಿದೆ. ಈ ಕ್ಷೇತ್ರದ ಜಿಲ್ಲಾ ಪ್ರವಾಸೋದ್ಯಮ ಸಚಿವರು, ಶಾಸಕರು, ಮಾಜಿ ಶಾಸಕರು, ಸ್ಥಳೀಯ ಪುರಸಭೆ ಈ ಧರ್ಮಕ್ಷೇತ್ರಕ್ಕೆ ಬರುವ ಭಕ್ತರಿಗೆ ಮೂಲಭೂತ ಸೌಲಭ್ಯ ಕಲ್ಪಿಸಬೇಕು ಎಂಬುದು ಶ್ರೀಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರ ಮತ್ತು ಭಕ್ತಗಣದ ಒಕ್ಕೊರಲಿನ ಒತ್ತಾಯವಾಗಿದೆ.

ಲಿಂ. ವೀರಗಂಗಾಧರ ಜಗದ್ಗುರುಗಳು ಲಕ್ಷ್ಮೇಶ್ವರ ನನ್ನ ತವರು ಮನೆ ಎಂದೇ ಹೇಳುತ್ತಿದ್ದರು. ಆದರೆ ಈ ಕ್ಷೇತ್ರದ ಅಭಿವೃದ್ಧಿ ವಿಷಯದಲ್ಲಿ ಮುಕ್ತಿಮಂದಿರ ಪಕ್ಕದ ಕುಂದಗೋಳ ತಾಲೂಕಿನ ವ್ಯಾಪ್ತಿಯ ಹರ್ಲಾಪುರ ಗ್ರಾ ಪಂಗೂ, ಲಕ್ಷ್ಮೇಶ್ವರ ತಾಲೂಕಿನ ರಾಮಗೇರಿ, ಗೋವನಾಳ, ಅಡರಕಟ್ಟಿ



ಗ್ರಾ ಪಂಗೂ ಸೇರುತ್ತದೆ ಎಂಬ ಗೊಂದಲದಿಂದ ಧರ್ಮಕ್ಷೇತ್ರದ ಅಭಿವೃದ್ಧಿ ಮರೀಚಿಕೆಯಾಗುತ್ತಿದೆ. ಆದರೆ ಶ್ರೀ ಕ್ಷೇತ್ರದ ಆಸ್ತಿ ದಾಖಲೆಗಳನ್ನು ಶಿರಹಟ್ಟಿ ತಹಸೀಲ್ದಾರ, ಪುರಸಭೆಯವರು ನೀಡಿದ್ದಾರೆ. 1948ರಲ್ಲಿಯೇ ಮಠ ನಿರ್ಮಾಣಕ್ಕೆ ಪುರಸಭೆ ಪರವಾನಗಿ ನೀಡಿದೆ. ಲಕ್ಷ್ಮೇಶ್ವರ ಪುರಸಭೆಯ 16ನೇ ವಾರ್ಡಿನ ವ್ಯಾಪ್ತಿಗೆ ಬರುತ್ತಿದ್ದು, ಕ್ಷೇತ್ರದ ಶ್ರೀಗಳ ಕುಟುಂಬ ಮತ್ತು ಅಲ್ಲಿರುವ ಸೇವಾ ಕರ್ತರು ಲಕ್ಷ್ಮೇಶ್ವರ ಪುರಸಭೆ ಮತ್ತು ಉಳಿದೆಲ್ಲ ಚುನಾವಣೆಯಲ್ಲಿ ಮತದಾನ ಮಾಡುತ್ತಾರೆ. ಆದರೆ ಕ್ಷೇತ್ರಕ್ಕೆ ಬರುವ ಭಕ್ತರ ಅನಕೂಲಕ್ಕಾಗಿ ಶೌಚಾಲಯ, ಕುಡಿಯುವ ನೀರು ಮತ್ತು ಅಭಿವೃದ್ಧಿ ಕೆಲಸ ಮಾತ್ರ ಮಾಡದಿರುವ ಬಗ್ಗೆ ಭಕ್ತರು ವಿಷಾದ ವ್ಯಕ್ತಪಡಿಸುತ್ತಿದ್ದಾರೆ.

> ಜಾತಿ, ಮತ, ಧರ್ಮ ಮೀರಿ ಈ ಭಾಗದ ಭಕ್ತರಿಗೆಲ್ಲ ಮುಕ್ತಿಮಂದರವೇ ಆರಾಧ್ಯ ಕ್ಷೇತ್ರವಾಗಿದೆ. ಕ್ಷೇತ್ರದ ಜಾತ್ರೆ, ಪುಣ್ಯಾರಾಧನೆ, ಅಗತ್ಯ ಸಂದರ್ಭದಲ್ಲಿ ಒಂದಷ್ಟು ಸ್ವಚ್ಚತೆ ಮಾಡುವುದನ್ನು ಬಿಟ್ಟರೆ ಪುರಸಭೆಯಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಧರ್ಮಕ್ಷೇತ್ರದಲ್ಲಿ ನಡೆದಿಲ್ಲ. ಪುರಸಭೆಗೆ ಬರುವ ಅನುದಾನದಲ್ಲಿ ಎಲ್ಲ ಸದಸ್ಯರೂ ಸೇರಿ ಭಕ್ತರ ಅನಕೂಲಕ್ಕಾಗಿ ಶುದ್ಧ ಕುಡಿಯುವ ನೀರು, ಸುಲಭ ಶೌಚಾಲಯ, ವಿದ್ಯುತ್ ದೀಪ ಸೇರಿ ಕೆಲ ಅಗತ್ಯ ಸೌಲಭ್ಯಗಳನ್ನಾದರೂ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈ ನಿಟ್ಟಿನಲ್ಲಿ ಮಠದ ಬಗ್ಗೆ ಅಪಾರ ಭಕ್ತಿ, ಗೌರವ ಹೊಂದಿರುವ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಮಾಜಿ ಶಾಸಕರು ಗಮನ ಹರಿಸಬೇಕು. ತಾವೂ ಸಹ ಭಕ್ತರೊಡಗೂಡಿ ಪ್ರತಿಭಟನೆ ಕೈಗೊಳ್ಳುವುದು ಶೋಭೆಯಲ್ಲ.
>
> **– ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು.**
> ಮುಕ್ತಿಮಂದಿರ ಧರ್ಮಕ್ಷೇತ್ರ.

ಲಕ್ಷ್ಮೇಶ್ವರದಿಂದ ಕೇವಲ 5 ಕಿ.ಮೀ ದೂರದಲ್ಲಿರುವ ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹತ್ತಾರು ವರ್ಷಗಳ ಹೋರಾಟದ ಫಲವಾಗಿ ಪ್ರಾರಂಭಗೊಂಡರೂ ಪೂರ್ಣಗೊಂಡಿಲ್ಲ. ಹಾವೇರಿ, ಕುಂದಗೋಳ ಮಾರ್ಗದಿಂದ ಸಂಪರ್ಕ ಕಲ್ಪಿಸುವ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಕ್ಷೇತ್ರಕ್ಕೆ ಬರುವ ಭಕ್ತರಿಗೆ ಮೂಲಭೂತ ಸೌಲಭ್ಯಗಳ ಅಗತ್ಯವಿದೆ. ಈಗಾಗಲೇ ಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪನೆಗಾಗಿ 6 ಸಾವಿರ ಶಿವಲಿಂಗಗಳು ಸಂಗ್ರಹಗೊಂಡಿವೆ. ರಂಭಾಪುರಿ ಜಗದ್ಗುರುಗಳು, ನೊಣವಿನಕೇರಿ ಶ್ರೀಗಳ ಕೃಪಾಶೀರ್ವಾದ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರ ಕಾಳಜಿಯಿಂದ ಕ್ಷೇತ್ರದಲ್ಲಿ ಬೃಹತ್ ಸಮುದಾಯ ಭವನ ಪೂರ್ಣಗೊಳ್ಳುವ ಹಂತ ತಲುಪಿದೆ.



> ಮುಕ್ತಿಮಂದಿರ ಧರ್ಮಕ್ಷೇತ್ರ ಪುರಸಭೆ ವ್ಯಾಪ್ತಿಗೆ ಬಂದರೂ 5–6 ಕಿ.ಮೀ ದೂರವಿದೆ. ಕ್ಷೇತ್ರ ವಿಂಗಡಣೆ ಕ್ರಿಯಾಯೋಜನೆಯಲ್ಲಿ ಮುಕ್ತಿಮಂದಿರವನ್ನು ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಗೆ ಸೇರಿಸಲು ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ಒಪ್ಪಿಗೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಗ್ಗೆ ಕ್ಷೇತ್ರದ ಶಾಸಕರು, ಮಾಜಿ ಶಾಸಕರು ಸಾಕಷ್ಟು ಕಳಕಳಿ ಹೊಂದಿದ್ದು, ಆದಷ್ಟು ಬೇಗ ಧರ್ಮ ಕ್ಷೇತ್ರದಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.
>
> **– ಶಂಕರ ಹುಲ್ಲಮ್ಮನವರ.**
> ಪುರಸಭೆ ಮುಖ್ಯಾಧಿಕಾರಿಗಳು.

ತ್ರಿಕೋಟಿ ಶಿವಲಿಂಗ ಸ್ಥಾಪನೆಗೆ ಭರದ ಸಿದ್ಧತೆ ನಡೆದಿದೆ. ಈ ಕಾರ್ಯ ಪೂರ್ಣಗೊಂಡರೆ, ಕ್ಷೇತ್ರಕ್ಕೆ ಭಕ್ತರ ದಂಡೇ ಹರಿದುಬರಲಿದೆ. ಮೂಲಭೂತ ಸೌಲಭ್ಯ ಕಲ್ಪಿಸುವ ಹೊಣೆಗಾರಿಕೆಯನ್ನು ಸಂಬಂಧಪಟ್ಟವರು ನಿಭಾಯಿಸಬೇಕಿದೆ ಎಂಬುದು ಭಕ್ತರ ಅಂಬೋಣ.

## ಶಿಕ್ಷಕರ, ನೌಕರರ ಸಂಘ ಹೋರಾಟಕ್ಕೆ ಕರೆ ನೀಡಿದರೆ ಸಿಎಂ ಕುರ್ಚಿ ನಡುಗುತ್ತೆ: ಎಸ್.ವಿ.ಸಂಕನೂರ



■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಸರಕಾರಿ ನೌಕರರ ಸಂಘ ಹೋರಾಟಕ್ಕೆ ಕರೆ ನೀಡಿದರೆ ಮುಖ್ಯಮಂತ್ರಿ ಅವರ ಕುರ್ಚಿ ನಡಗುತ್ತದೆ, ಅಷ್ಟೊಂದು ಶಕ್ತಿ ಈ ಸಂಘಟನೆಗಳಿಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಅವರು ಹೇಳಿದರು.

ನಗರದ ಅಂಬೇಡ್ಕರ ಭವನದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಘಟಕದ ವತಿಯಿಂದ ಸೋಮವಾರ ಜರುಗಿದ ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನ, ಸಾಧಕ ಶಿಕ್ಷಕ–ಶಿಕ್ಷಕರಿಗೆ ಸನ್ಮಾನ, ಉತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರಧಾನ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಬಲೀಕರಣ ಕುರಿತು ಕಾರ್ಯಗಾರ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಕಾರ್ಯಗಾರ ಅರ್ಥಪೂರ್ಣ ಆಗಬೇಕಾದರೆ ಸಬಲೀಕರಣದ ಬಗ್ಗೆ ಚಿಂತನೆ ಇಟ್ಟುಕೊಂಡು ಚರ್ಚೆ ಆಗಬೇಕು. ಪ್ರಚಲಿತ ಶೈಕ್ಷಣಿಕ ವ್ಯವಸ್ಥೆಗಳಲ್ಲಿನ ಸಮಸ್ಯೆ ಹಾಗೂ ಸವಾಲುಗಳಿವೆ ಅವುಗಳನ್ನು ಬಗೆಹರಿಸುವ ಕುರಿತು ಸರ್ಕಾರಕ್ಕೆ ತಲುಪಿಸುವ ಕೆಲಸ ಮಾಡಬೇಕು. ಪ್ರಾಥಮಿಕ ಶಾಲಾ ಶಿಕ್ಷಕರು ಶಿಕ್ಷಣದ ಮಹತ್ವ ಮತ್ತು ಶಿಕ್ಷಕರ ಪಾತ್ರದ ಬಗ್ಗೆ ಅರಿವಿರಬೇಕು. ಇಡೀ ಸಮಾಜಕ್ಕೆ ಶಿಕ್ಷಕರ ಬಗ್ಗೆ ಅಪಾರ ಗೌರವವಿರುವುದರಿಂದ ಶ್ರದ್ದೆಯಿಂದ ಕೆಲಸ ಮಾಡಬೇಕು ಎಂದು ಸಂಕನೂರ ಹೇಳಿದರು.

ಪ್ರಸ್ತುತ ರಾಜ್ಯ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಪಡಿಸಲು ಹೊರಟಿರೋದು ಸರಿಯಾದ ಕ್ರಮವಲ್ಲ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜನರಿಗೆ ತಲುಪಬೇಕಾದರೆ ಕೇಂದ್ರ ಸರ್ಕಾರವು ಸಾಕಷ್ಟು ವಿಧಾನವನ್ನು ಅನುಸರಿಸದೆ. ದಿಢೀರನೆ ಕ್ರಮ ಕೈಗೊಳ್ಳದೆ ಪರಿಶೀಲನೆ ಮಾಡಬೇಕು. ದೇಶಕ್ಕೆ ಜಾರಿಯಾದ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯಾಗಿದೆ. 1968, 1986 ಹಾಗೂ 1992ರ ವರದಿಯನ್ನು ಪರಿಷ್ಕರಿಸಿ 34 ವರ್ಷಗಳ ನಂತರ ಮೋದಿಯವರು 21ನೇ ಶತಮಾನಕ್ಕೆ ಬೇಕಾಗುವ ಶಿಕ್ಷಣದ ವರದಿಯನ್ನು ಸಿದ್ಧಪಡಿಸಿದ್ದಾರೆ. ಜನರ ಅಭಿಪ್ರಾಯದ ಮೇಲೆ ವರದಿ ಸಂಗ್ರಹವಾಗಿದ್ದು ಸರ್ಕಾರ ದಿಢೀರನೆ ಕ್ರಮ ಕೈಗೊಳ್ಳಬಾರದು ಎಂದು ಎಸ್.ವಿ.ಸಂಕನೂರ ಅವರು ಹೇಳಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವಿ.ಎಂ. ಹಿರೇಮಠ ಮಾತನಾಡಿ, ಶಿಕ್ಷಕ ವರ್ಗವು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳನ್ನು ಪರಿಹರಿಸಲು ಸರ್ಕಾರ ಕ್ರಮಕೈಗೊಳ್ಳಬೇಕು ಮತ್ತು ಜಿಲ್ಲೆಯಲ್ಲಿ ಶಿಕ್ಷಕರ ಸಮುದಾಯ ಭವನ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಡಾ. ಚಂದ್ರ ಲಮಾಣಿ, ಅಖಿಲ ಭಾರತ ಪ್ರಾಥಮಿಕ ಶಾಲಾ ಶಿಕ್ಷಕರ ಪೆಡರೇಷನ್ ನವದೆಹಲಿಯ ಕಾರ್ಯಾಧ್ಯಕ್ಷ ಬಸವರಾಜ ಗುರಿಕಾರ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಗಲಿ, ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ರವಿ ಗುಂಜಿಕರ, ಎಸ್.ಎಸ್. ನಾಗೂರ, ಎಸ್.ಎಸ್. ಗಾಂಜಿ, ಡಿ.ಐ. ಅಸುಂಡಿ, ಮಂಗಳಾ ತಾಪಸ್ಕರ, ಕೆ.ಬಿ. ಕೊಣ್ಣೂರ, ಪ್ರೇಮನಾಥ ಗರಗ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸೇವಾ ನಿವೃತ್ತಿ ಹೊಂದಿದ ಡಿಡಿಪಿಐ ಬಸವಲಿಂಗಪ್ಪ ಜಿ.ಎಂ. ಅವರನ್ನು ಹಾಗೂ ಸಾಧಕ ಶಿಕ್ಷಕ– ಶಿಕ್ಷಕಿಯರಿಗೆ ಮತ್ತು ಉತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಮಹೇಶ ಕುರಿ ಕಾರ್ಯಕ್ರಮ ನಿರೂಪಿಸಿದರು.

## ಬಿಬಿಎಂಪಿ ಪುಟ್ ಪಾತ್ ವ್ಯಾಪಾರಿಗಳ ತೆರವಿಗೆ ಕಠಿಣ ಕ್ರಮ: ಡಿಸಿಎಂ ಡಿಕೆ ಶಿವಕುಮಾರ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನಗರದಲ್ಲಿಪುಟ್ ಪಾತ್ ವ್ಯಾಪಾರಿಗಳು ಜನರಿಗೆ ಓಡಾಡುವ ರಸ್ತೆಯನ್ನು ಆಕ್ರಮಿಸಿಕೊಂಡಿದ್ದಾರೆ.

ಹೀಗಾಗಿ ಜನರಿಗೆ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲದಿರುವುದರಿಂದ ಅಪಘಾತಗಳು ಆಗುತ್ತಿವೆ. ನಾನೇನು ವ್ಯಾಪಾರಿಗಳ ವಿರೋಧಿ ಅಲ್ಲ. ಆದರೆ ಜನರಿಗೆ ಓಡಾಡಲು ಬಿಟ್ಟು ವ್ಯಾಪಾರ ಮಾಡಿಕೊಳ್ಳಲಿ. ಬೆಂಗಳೂರಿನ ಫುಟ್ ಪಾತ್ ಕ್ಲಿಯರ್ ಮಾಡುತ್ತಿದ್ದೇವೆ. ಬಿಬಿಎಂಪಿ ಅಧಿಕಾರಿಗಳಿಗೆ ಪಾಲಿಸಿ ಬಗ್ಗೆ ಮಾತನಾಡಬೇಡಿ ಎಂದು ಸೂಚನೆ ನೀಡಿದ್ದೇನೆ. ಪಾಲಿಸಿ ಬಿಟ್ಟು ಅಧಿಕಾರಿಗಳು ಮಾಧ್ಯಮಗಳಿಗೆ ಮಾತನಾಡಬಹುದು ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ತಿಳಿಸಿದರು.

ನಗರದ ಹೊರವಲಯದಲ್ಲಿ ಉದ್ದೇಶಿತ ವರ್ತುಲ ರಸ್ತೆ ನಿರ್ಮಾಣದಿಂದ ಭೂಮಿ ಕಳೆದುಕೊಳ್ಳಲಿರುವ ಮಾಲೀಕರು ಹಾಗೂ ರೈತರ ಜತೆ ಡಿ.ಕೆ ಶಿವಕುಮಾರ್ ಅವರು ಬೆಂಗಳೂರಿನಲ್ಲಿ ಸೋಮವಾರ ಸಂವಾದ ನಡೆಸಿ, ಅಹವಾಲು ಆಲಿಸಿದರು. ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಕಮಿಷನರ್ ಕುಮಾರ ನಾಯಕ್, ಜಿಲ್ಲಾಧಿಕಾರಿ ದಯಾನಂದ, ಐಎಎಸ್ ಅಧಿಕಾರಿ ರಾಜೇಂದ್ರ ಚೋಳನ್, ಡಿಸಿಎಂ ಆಪ್ತ ಕಾರ್ಯದರ್ಶಿ ಡಾ ರಾಜೇಂದ್ರ ಪ್ರಸಾದ್, ಭೂಸ್ವಾಧೀನ ಉಪ ಆಯುಕ್ತೆ ಸೌಜನ್ಯ ಮತ್ತಿತರರು ಭಾಗವಹಿಸಿದ್ದರು.

ಇದೇ ಸಂದರ್ಭ ಮಾಧ್ಯಮದವರೊಂದಿಗೆ ಮಾತನಾಡಿದ ಡಿ ಕೆ ಶಿವಕುಮಾರ್, 18 ವರ್ಷದಿಂದ ಪೆರಿಫೆರಲ್ ರಸ್ತೆ ನೆನೆಗುದಿಗೆ ಬಿದ್ದಿದೆ. ಅನೇಕ ತೀರ್ಮಾನಗಳನ್ನು ಸರ್ಕಾರ ತೆಗೆದುಕೊಂಡಿದೆ. ಕೋರ್ಟ್ ಆದೇಶ ಕೂಡ ಕೊಟ್ಟಿದೆ. ರೈತರಿಗೆ ಸಹಾಯ ಆಗುತ್ತಿಲ್ಲ. ರೈತರು ಎನ್ ಒಸಿ ಕೇಳುತ್ತಿದ್ದು, ಕೊಡುವುದಕ್ಕೆ ಆಗಲ್ಲ ಅಂತ ಹೇಳಿದ್ದೇವೆ.



ಗದಗ ಸಮಿಪದ ತಿಮ್ಮಾಪೂರ ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆಯ ಮೊಹರಂ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ತ್ಯಾಗ, ಬಲಿದಾನದ ಸಂಕೇತವಾದ ಮೊಹರಂ ಹಬ್ಬವನ್ನು ಹಿಂದ–ಮುಸ್ಲಿಂ ಬಾಂಧವರು ಅಲೈ ದೇವರಿಗೆ ಹರಕೆಗಳನ್ನು ತೀರಿಸುವ ಮೂಲಕ ಭ್ರಾತೃತ್ವ ಭಾವನೆ ಮೂಡಿಸಿದರು.

### ಪ್ರತಿಜ್ಞಾ ವಿಧಿ ಕಾರ್ಯಕ್ರಮದಲ್ಲಿ ಅಪ್ಪಾಸಾಬ ನಾಯಿಕ

# ಮಾನವ ಕಳ್ಳ ಸಾಗಾಣಿಕೆ ತಡೆ ಎಲ್ಲರ ಜವಾಬ್ದಾರಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಾನವ ಕಳ್ಳ ಸಾಗಾಣಿಕೆ ತಡೆ ಎಲ್ಲರ ಜವಾಬ್ದಾರಿಯಾಗಿದ್ದು, ಮಾನವ ಕಳ್ಳ ಸಾಗಾಣಿಕೆ ಎಂಬ ಪಿಡುಗನ್ನು ಸಮಾಜದಿಂದ ದೂರ ಮಾಡುವದಕ್ಕೆ ಮುಂದಾಗಬೇಕಾಗಿದೆ ಎಂದು ದಿವಾಣಿ ನ್ಯಾಯಾಧೀಶರಾದ ಅಪ್ಪಾಸಾಬ ಆರ್ ನಾಯಿಕ ಹೇಳಿದರು.

ಅವರು ಪಟ್ಟಣದ ತಾಲೂತಾ ಪಂಚಾಯತ ಸಭಾಂಗಣದಲ್ಲಿ ಕಾನೂನು ಸೇವಾ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ವಕೀಲರ ಸಂಘ ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ಇವರ ಸಂಯುಕ್ತಾಶ್ರಯದಲ್ಲಿ ರವಿವಾರ ನಡೆದ 'ಮಾನವ ಕಳ್ಳಸಾಗಾಣಿಕೆ ತಡೆ ದಿನಾಚರಣೆ' ಪ್ರತಿಜ್ಞಾ ವಿಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಮಾನವ ಕಳ್ಳ ಸಾಗಾಣಿಕೆ ಒಂದು ಸಾಮಾಜಿಕ ಪಿಡುಗಾಗಿದೆ. ಈ ಪಿಡುಗನ್ನು ನಿರ್ಮೂಲನೆ ಮಾಡುವುದು ಸಮಾಜದ ಎಲ್ಲರ ಜವಾಬ್ದಾರಿ. ಈ ಕಾರ್ಯದಲ್ಲಿ ಸಮಾಜದ ಪ್ರತಿಯೊಬ್ಬರೂ ತಮ್ಮ ವ್ಯಾಪ್ತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕಳ್ಳಸಾಗಾಣಿಕೆ ಜಾಲದಲ್ಲಿ ಸಿಲುಕಿ ಅಮಾನವೀಯ, ಕರುಣಾಜನಕ ಪರಿಸ್ಥಿತಿಯಲ್ಲಿ ಇಂದು ಶೋಷಣೆಗೆ ಒಳಗಾಗುತ್ತಿದ್ದಾರೆ. ತಮ್ಮನ್ನ ತಾವು ರಕ್ಷಿಕೊಳ್ಳಲು ಸಾಧ್ಯವಾಗುದೇ ಇರುವ ಮಹಿಳೆಯರು ಮತ್ತು ಮಕ್ಕಳ ಗುರಿಯಾಗಿಟ್ಟುಕೊಂಡಿರುವ ಮಾನವ ಕಳ್ಳಸಾಗಾಣಿಕೆ ಒಂದು ದೇಶದ ಪಿಡುಗಾಗಿದೆ ಎಂದು ಹೇಳಿದರು.

ತಹಸೀಲ್ದಾರ ಕೆ ಆನಂದಶೀಲ, ಶಿರಹಟ್ಟಿ ತಹಸೀಲ್ದಾರ ಅನಿಲ ಬಡಿಗೇರ, ಸಿಪಿಐ ವಿಕಾಸ ಲಮಾಣಿ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಮಾಹಿತಿ ನೀಡಿದರು. ಇಂತಹ ಸಂದರ್ಭದಲ್ಲಿ ಸಹಾಯವಾಣಿ 112ನ್ನು ಅಗತ್ಯ ಸನ್ನಿವೇಶಗಳಲ್ಲಿ ಉಪಯೋಗಿಸಿ, ಪೊಲೀಸ್ ಇಲಾಖೆಯ ಸಹಾಯ ಪಡೆಯಲು ತಿಳಿಸಿದರು. ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ಪ್ಯಾನಲ್ ವಕೀಲರಾದ ವಿ ಎಸ್ ಪಶುಪತಿಹಾಳ್, ಪಿ ಎಂ ವಾಲಿ ಮಾಹಿತಿ ನೀಡಿ, ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ತಾ ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ, ಗ್ರೇಡ್–2 ತಹಸೀಲ್ದಾರ ನಟರಾಜ್, ಪಿಎಸ್ಐ ಯೂಸುಪ್ ಜೂಮೂಲಾ, ಸಿಡಿಪಿಓ ಮೃತ್ಯುಂಜಯ ಜಿ., ವಕೀಲರ ಸಂಘದ ಉಪಾಧ್ಯಕ್ಷ ಕೆ ಟಿ ಕಟ್ಟಿಮನಿ ಮುಂತಾದವರಿದ್ದರು. ಅಂಗನವಾಡಿ ಕಾರ್ಯಕರ್ತರು ಹಾಗೂ ಅಧಿಕಾರಿಗಳು ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ಪ್ರತಿಜ್ಞೆ ಸ್ವೀಕರಿಸಿದರು. ಅಂಗನವಾಡಿ ಮೇಲ್ವಿಚಾರಕಿ ನಂದಾ ನವಲೆ ನಿರೂಪಿಸಿದರು.

> ಮಕ್ಕಳನ್ನು, ಮಹಿಳೆಯರನ್ನು ಅಪಹರಿಸಿ ಕಾನೂನುಬಾಹಿರ ಹಾಗು ಅನೈತಿಕ ಚಟುವಟಿಕೆಗಳಲ್ಲಿ ತೊಡುಗಿಸುತ್ತಿರುವುದು ವಿಷಾದದ ಸಂಗತಿಯಾಗಿದೆ. ಅಪಹೃತ ಮಕ್ಕಳನ್ನು ಅಪರಾಧ ಚಟುವಟಿಕೆಗಳಲ್ಲಿ, ಭಿಕ್ಷಾಟನೆಯಲ್ಲಿ ತೊಡಗಿಸಲಾಗುತ್ತಿದೆ. ಇಂತಹ ಹೀನ ಕೃತ್ಯ ತಪ್ಪಿಸುವುದು ನಾಗರಿಕ ಸಮಾಜದ ಜವಾಬ್ದಾರಿ. ಅಪರಿಚಿತ ವ್ಯಕ್ತಿಗಳು ಕಂಡುಬಂದರೆ ತಕ್ಷಣ ಪೊಲೀಸರ ಗಮನಕ್ಕೆ ತರಬೇಕು.
>
> **– ಅಪ್ಪಾಸಾಬ ಆರ್ ನಾಯಿಕ.**
> ದಿವಾಣಿ ನ್ಯಾಯಾಧೀಶರು, ಲಕ್ಷ್ಮೇಶ್ವರ.

### ಅಭಿನಂದನಾ ಸಮಾರಂಭದಲ್ಲಿ ವೇ. ಮಹೇಶ್ವರಸ್ವಾಮಿಜಿ ಹೊಸಳ್ಳಿಮಠ

# ಕಲಕೇರಿಯವರು ಸಂಗೀತ, ಸಾಹಿತ್ಯ ಲೋಕದ ಮೇರುಪರ್ವತ



■ವಿಜಯಸಾಕ್ಷಿ ಸುದ್ದಿ, ಗದಗ

ಪಂ. ರಾಜಗುರು ಗುರುಸ್ವಾಮಿ ಕಲಕೇರಿ ಅವರು ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಗಳನ್ನು ಮಾಡಿದ್ದಾರೆ. ಅವರು ಸಂಗೀತದೊಂದಿಗೆ ನಾಟಕ, ಸಾಹಿತ್ಯ ಜನಪದದ ಅಭಿರುಚಿ ಮೂಡಿಸಿ ಸಾವಿರಾರು ಕಲಾವಿದರಿಗೆ ತಮ್ಮ ವಿದ್ಯೆಯನ್ನು ಧಾರೆ ಎರಿದಿದ್ದಾರೆ ಎಂದು ಅಡವೀಂದ್ರಸ್ವಾಮಿ ಶ್ರೀಮಠದ ಧರ್ಮದರ್ಶಿ ವೇ. ಮಹೇಶ್ವರಸ್ವಾಮಿಜಿ ಹೊಸಳ್ಳಿಮಠ ಅವರು ಹೇಳಿದರು.

ನಗರದ ಅಡವೀಂದ್ರಸ್ವಾಮಿ ಮಠ ಹಾಗೂ ಶ್ರೀಗುರು ಪಂಚಾಕ್ಷರಿ ಸೇವಾ ಸಮಿತಿ ಇವರ ಸಹಯೋಗದಲ್ಲಿ ಇತ್ತೀಚೆಗೆ ಸಂಗೀತ ಹಾಗೂ ಸಾಹಿತ್ಯ ಸೇವೆಗಾಗಿ ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಡಾ. ರಾಜಗುರು ಗುರುಸ್ವಾಮಿ ಕಲಿಕೇರಿ ಅವರ ಅಭಿನಂಧನಾ ಸಮಾರಂಭದಲ್ಲಿ ಸಮ್ಮುಖವಹಿಸಿ ಅವರು ಮಾತನಾಡಿದರು.

ಶಶಿಧರಶಾಸ್ತ್ರಿ ಡೋಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ದಸರಾ ಮಹೋತ್ಸವ ಸಮಿತಿಯ ಮೋಹನ ಗ್ವಾರಿ, ಶಾಂತಾಬಾಯಿ ಬಾಕಳೆ, ಶಿವಾನುಭವ ಸಮಿತಿ ಅಧ್ಯಕ್ಷ ವಿ ಎಂ ಕುಂದ್ರಾಳಹಿರೇಮಠ, ಎಂ ಎಂ ಶಿರೋಳಮಠ, ಶರಣುಕುಮಾರ ಗುತ್ತರಗಿ, ಡಾ.ಶಿವಬಸಯ್ಯ ಗಡ್ಡದಮಠ, ಪ್ರೊ. ಎಂ ಎಸ್ ಮಠದ, ವಿನಾಯಕ ಸಜ್ಜನ ಮುಂತಾದವರು ಉಪಸ್ಥಿತರಿದ್ದರು.

ಸುವರ್ಣಗಿರಿ ಸಂಸ್ಥಾನಮಠದ ಭಕ್ತಾಧಿಗಳು ಸೇರಿದಂತೆ ಕನಕಗಿರಿ, ಮೆದಕನಾಳ, ಹಾನಗಲ್‌ನ ವೆಂಕಟೇಶ ಪೂಜಾರ ಹಾಗೂ ಗದುಗಿನ ಭಕ್ತರು ಕಲಿಕೇರಿ ಅವರನ್ನು ಸನ್ಮಾನಿಸಿದರು. ಸಿದ್ದಣ್ಣ ಜವಳಿ ಸ್ವಾಗತಿಸಿದರು. ಶ್ರೀಶೈಲ ಚಿಕ್ಕಮಠ ಪ್ರಾರ್ಥಿಸಿದರು. ಡಾ. ನಾರಾಯಣ ಹಿರೇಕೊಳಚೆ ಅವರು ವಯೋಲಿನ್ ನುಡಿಸಿದರು. ಡಾ. ಹನುಮಂತ ಕೊಡಗಾನೂರ ಅವರು ತಬಲಾ ಸಾಥ್ ನೀಡಿದರು. ಸಿದ್ದಲಿಂಗಯ್ಯಶಾಸ್ತ್ರಿ ಗಡ್ಡದಮಠ ಕಾರ್ಯಕ್ರಮ ನಿರೂಪಿಸಿದರು. ಯು. ಆರ್. ಬೂಸರನೂರಮಠ ವಂದಿಸಿದರು.

> ಯಾವುದೇ ಪದವಿಗಳಿಲ್ಲದೆ ಸಾಹಿತ್ಯ ಬರವಣಿಗೆಯ ಆರು ಸಾವಿರ ಪುಟಗಳನ್ನು ಪ್ರಕಟಿಸಿದ್ದಾರೆ. ಇವರ ಸಾಧನೆಯಿಂದ ರಾಜ್ಯ ಸರಕಾರ ಕರ್ನಾಟಕ ಕಲಾಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಂತ ಶಿಶುನಾಳ ಪ್ರಶಸ್ತಿ ಸೇರಿದಂತೆ ಐವತ್ತಕ್ಕೂ ಹೆಚ್ಚು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವರ ಸಾಧನೆಯನ್ನು ಮೆಚ್ಚಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯವು 33ನೇ ವಾರ್ಷಿಕ ಘಟಿಕೋತ್ಸವದಂದು ಡಾಕ್ಟರ್ ಆಫ್ ಲೆಟರ್ಸ್ ಪದವಿಯನ್ನು ನೀಡಿ ಗೌರವಿಸಿದ್ದಾರೆ. ಶ್ರೀಗುರು ಪಂಚಾಕ್ಷರಿ ಸೇವಾ ಸಮಿತಿಯಿಂದ 2023ರಿಂದ ಡಾ. ರಾಜಗುರು ಗುರುಸ್ವಾಮಿ ಕಲಕೇರಿ ಹೆಸರಿನಲ್ಲಿ 10 ಸಾವಿರ ರೂ.ಗಳ ನಗದು 'ಯುವ ಪ್ರಶಸ್ತಿ' ನೀಡಲಾಗುವುದು.
>
> **– ಶಿವಲಿಂಗಯ್ಯಶಾಸ್ತ್ರಿಜೀ ಸಿದ್ದಾಪೂರ.**

## ಬಾಲೆಹೊಸೂರ ಗ್ರಾ ಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕುತೂಹಲ ಮೂಡಿಸಿದ್ದ ಬಾಲೆಹೊಸೂರ ಗ್ರಾಮ ಪಂಚಾಯತಿಗೆ ಸೋಮವಾರ ನಡೆದ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಚನ್ನವ್ವ ಕೆಂಚಪ್ಪ ಮೈಲಾರಿ, ಉಪಾಧ್ಯಕ್ಷರಾಗಿ ರೇಖಾ ಸಿದ್ದಪ್ಪ ನೆನಗನಹಳ್ಳಿ ಆಯ್ಕೆಯಾಗಿದ್ದಾರೆ.

ಒಟ್ಟು 15 ಸದಸ್ಯ ಸ್ಥಾನಗಳನ್ನು ಹೊಂದಿದ ಗ್ರಾ ಪಂ ಅಧ್ಯಕ್ಷ ಸ್ಥಾನ ಹಿಂದುಳಿದ ಅ ವರ್ಗದ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಅನುಸೂಚಿತ ಜಾತಿ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ರೇಖಾ ಸಾಂಧ್ಲಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೌಭಾಗ್ಯ ಮುದಿಯಮ್ಮನವರ ಪ್ರತಿಸ್ಪರ್ಧಿಯಾಗಿ ನಾಮಪತ್ರ ಸಲ್ಲಿಸಿದ್ದರು.

ಸದಸ್ಯ ಹೂವಪ್ಪ ದೀಪಾವಳಿ ಅವರ ತಾಯಿ ನಿಧನರಾದ ದು–ಃಖದ ನಡುವೆಯೂ ಮತದಾನ ಮಾಡಿದ್ದು ಗಮನ ಸೆಳೆಯಿತು.

ಈ ವೇಳೆ ನಾಗಯ್ಯ ಮಠಪತಿ, ವಿರೂಪಾಕ್ಷಪ್ಪ ಮರಳಿಹಳ್ಳಿ, ನೀಲಪ್ಪ ಮಾಯಕೊಂಡ, ಸಿದ್ದಪ್ಪ ನೆನಗನಗಳ್ಳಿ, ನಿಂಗಪ್ಪ ಪ್ಯಾಟಿ, ರಮೇಶ ಜೋಗೇರ, ಮಾರುತಿ ಸತ್ಯಮ್ಮನವರ, ನಾಗಪ್ಪ ಸಣ್ಣತೋಟಗೇರ, ಮಹರುದ್ರಪ್ಪ ಬಡಿಗೇರ, ಫಕ್ಕೀರಪ್ಪ ಮಕರಬ್ಬಿ, ಸುರೇಶ ಗಾಣಿಗೇರ ಸೇರಿ ಗ್ರಾ ಪಂ ಸದಸ್ಯರು, ಸಿಬ್ಬಂದಿಗಳಿದ್ದರು. ಚಂದ್ರಶೇಖರ ನರಸಮ್ಮನವರ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka